

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 271 Sunday 17-03-2024 E-mail : maruti.b.hosamani76@gmail.com Page: 4 Price : Rs. 1/-

## ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಜನರ ನೀರಿನ ತಣಿಸಲು ಕರವೇ ಕಾರ್ಯಕರ್ತರಿಂದ ನೀರಿನ ಅರವಟ್ಟಿಗೆ ಆರಂಭ



**ಹುನಗುಂದ** : ಬಿರು ಬಿಸಲಿಗೆ ಬಸವಳಿದ ತಾಲೂಕಿನ ನಾನಾ ಗ್ರಾಮಗಳಿಂದ ತಮ್ಮ ಕೆಲಸ ಕಾರ್ಯಗಳ ನಿಮಿತ್ಯ ತಹಶೀಲ್ದಾರ್ ಕಚೇರಿಗೆ ಆಗಮಿಸುವ ರೈತರು ಮತ್ತು ಸಾರ್ವಜನಿಕರ ನೀರಿನ ದಾಹವನ್ನು ತಣಿಸಲು ಶುಕ್ರವಾರ ತಹಶೀಲ್ದಾರ ಕಚೇರಿಯ ಆವರಣದಲ್ಲಿ ಎಚ್.ಶಿವರಾಮೇಗೌಡ್ರ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು 2 ತಿಂಗಳವರಗೆ ಉಚಿತ ನೀರಿನ ಅರವಟ್ಟಿಗೆಯನ್ನು ಆರಂಭಿಸುವ ಮೂಲಕ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ.

ಹೌದು ಮಾ.13 ರಂದು ಉದಯಕಾಲ ಪತ್ರಿಕೆಯಲ್ಲಿ ಹುನಗುಂದ ತಹಶೀಲ್ದಾರ ಕಾರ್ಯಾಲಯದಲ್ಲಿ ಕುಡಿಯುವ ನೀರಿಗೆ ಬರ ಎನ್ನುವ ವರದಿ ಪ್ರಕಟವಾದ ಬೆನ್ನಲ್ಲೆ ಅದನ್ನು ಓದಿದ ಎಚ್.ಶಿವರಾಮೇಗೌಡ್ರ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ತಹಶೀಲ್ದಾರ ಕಚೇರಿಯ ಮುಂದೆ ಎರಡು ನೀರಿನ ಅರವಟ್ಟಿಗಳನ್ನು ನಿರ್ಮಿಸಿ ಕಚೇರಿಗೆ ಬರುವ ಸಾರ್ವಜನಿಕರ ನೀರಿನ ದಾಹವನ್ನು ತೀರಿಸಲು ಮುಂದಾಗಿರುವುದು ಆ ಸಂಘಟನೆಯ ಕಾರ್ಯಕರ್ತರ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದೆ.

ತಹಶೀಲ್ದಾರ ನಿಂಗಪ್ಪ ಬಿರಾದಾರ ಅರವಟ್ಟಿಗೆಯನ್ನು ಉದ್ಘಾಟಿಸಿ ಮಾತನಾಡಿ ಬೇಸಿಗೆ ಬೀಸಲು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು. ಬಿಸಲಿನ ತಾಪವನ್ನು ತಣಿಸಲು ನೀರಿನ ಅರವಟ್ಟಿಗೆಗಳು ಅವಶ್ಯ. ನೀರಿನ ದಾಹ ತೀರಿಸುವುದು ಪುಣ್ಯದ ಕಾರ್ಯ ಅಂತಹ ಕಾರ್ಯವನ್ನು ಕರ್ನಾಟಕ ರಕ್ಷಣಾ ವೇದಕೆಯ ಅಧ್ಯಕ್ಷರು ಮತ್ತು ಕಾರ್ಯಕರ್ತರು ಮಾಡಿದ್ದು ನಿಜಕ್ಕೂ ಸ್ವಾಗತಾರ್ಹವಾಗಿದೆ. ಇನ್ನು ಇಂತಹ ಹತ್ತು ಹಲವಾರು ಸಮಾಜಮುಖಿ ಕಾರ್ಯಗಳನ್ನು ಈ ಸಂಘಟನೆಯಿಂದ ನಡೆಯಲಿ ಎಂದು ಶುಭ ಹಾರೈಸಿದರು.

ಎಚ್.ಶಿವರಾಮೇಗೌಡ್ರ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕಾಧ್ಯಕ್ಷ ಶರಣು ಗಾಣಗೇರ ಮಾತನಾಡಿ ಈ ಬಾರಿ ಮಳೆಯ ಅಭಾವ ದಿಂದ ಬೇಸಿಗೆ ಬಿಸಿಲು ಜೋರಾಗಿದೆ. ಬೇಸಿಗೆಯಲ್ಲಿ ಅನ್ನಕ್ಕಿಂತಲ್ಲೂ ನೀರು ಬಹಳ ಮುಖ್ಯ.

ತಹಶೀಲ್ದಾರ ಕಚೇರಿಯಲ್ಲಿ ನೀರಿನ ಬರ ಎನ್ನುವ ಸುದ್ದಿಯನ್ನು ಓದಿದೆ. ನಿತ್ಯ ಸಾವಿರಾರು ಜನರು ತಮ್ಮ ಕೆಲಸ ಕಾರ್ಯಗಳಿಗಾಗಿ ಇಲ್ಲಿಗೆ ಜನರು ಬರುತ್ತಾರೆ ಅವರ ನೀರಿನ ದಾಹವನ್ನು ತಣಿಸಲು ಅರವಟ್ಟಿಗೆಯನ್ನು ನಿರ್ಮಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ತಾಲೂಕಾ ಕಾರ್ಮಿಕ ಘಟಕದ ಅಧ್ಯಕ್ಷ ಸಿದ್ದಪ್ಪ ಮೂಲಿಮನಿ, ತಾಲೂಕ ಗೌರವ ಕಾರ್ಯದರ್ಶಿಗಳಾದ ಸಂಗಣ್ಣ ನೇಗಲಿ,ತಮ್ಮಣ್ಣ ಸೂಡಿ, ಉಪಾಧ್ಯಕ್ಷ ಶ್ರೀಕಾಂತ ಗಗನದ,ಪ್ರಧಾನ ಕಾರ್ಯದರ್ಶಿ ಹುಸನಪ್ಪ ಪೂಜಾರಿ,ಇಳಕಲ್ಲ ಕರವೇ ಮಹಿಳಾ ಘಟಕದ ಉಪಾಧ್ಯಕ್ಷೆ ಅನುಸೂಯ ಐಲಿ,ಪ್ರಧಾನ ಕಾರ್ಯದರ್ಶಿ ರೂಪ ಮಾನಸ್,ಇದ್ದಲಗಿ ಗ್ರಾಮ ಘಟಕದ ಅಧ್ಯಕ್ಷ ಬಸಯ್ಯ ಮಂಟೇದೇವರಮಠ,ಸಂಘಟನಾ ಕಾರ್ಯದರ್ಶಿ ಅಶೋಕ ನಾಡಗೌಡ್ರ ಸೇರಿದ್ದಂತೆ ಅನೇಕರು ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ. ಬಂಡರಗಲ್ಲ. ಹುನಗುಂದ**

## ನಿರ್ಭಯವಾಗಿ ಮತ ಚಲಾಯಿಸಿ ಮತದಾನ ಮಾಡುವುದು ನಿಮ್ಮ ಹಕ್ಕು: ಗೀತಾಂಜಲಿ ಸಿಂಧೇ ಪಿ.ಎಸ್.ಐ





**ಕೊಟ್ಟೂರು** : ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದಲ್ಲಿ 2024 ರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿಕಾಸ್ ಲಮಾಣಿ ಸರ್ಕಲ್ ಇನ್ಸ್ಪೆಕ್ಟರ್ ಮತ್ತು ಗೀತಾಂಜಲಿ ಸಿಂಧೇ ಪಿಎಸ್ಐ ನೇತೃತ್ವದಲ್ಲಿ 16 ಮಾರ್ಚ್ 2024 ರಂದು ಶನಿವಾರ ಚುನಾವಣಾ ಭದ್ರತೆಗೆ ನಿಯೋಜನೆ ಗೊಂಡ ಅರೆ ಸೇನಾಪಡೆ ಹಾಗೂ ಪೊಲೀಸರ ಪಥ ಸಂಚಲನ ಮತ್ತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮತದಾರರೇ ಹೆದರದಿರಿ ನಿಮ್ಮೊಂದಿಗೆ ನಾವಿದ್ದೇವೆ ನಿರ್ಭಯವಾಗಿ ಮತ ಚಲಾಯಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸುತ್ತೇವೆ ಎಂಬ ಸಂದೇಶ ಸಾರುವ ಮೂಲಕ ಈ ಪಥ ಸಂಚಲನವನ್ನು ಕೈಗೊಂಡಿರುವುದಾಗಿ ಪಿಎಸ್ಐ ಗೀತಾಂಜಲಿ ಸಿಂಧೇ ತಿಳಿಸಿದರು.

ಪ್ರತಿಯೊಬ್ಬರೂ ಮತಗಟ್ಟೆಗೆ ಬಂದು ಮತ ಚಲಾವಣೆ ಮಾಡಿ ಪ್ರಜಾಪ್ರಭುತ್ವ ಗಟ್ಟಿ ಆಗಬೇಕಾಗಿದೆ.ಇದರಿಂದ ನ್ಯಾಯ ಸಮ್ಮತ ಅಭ್ಯರ್ಥಿ ಆಯ್ಕೆಯಾಗುವವರು ಹಾಗಾಗಿ ಜನರು ನಿರ್ಭಯವಾಗಿ ಮತ ಚಲಾಯಿಸಲು ಶಾಂತಿ ಹಾಗೂ ಭದ್ರತೆ ಕೈಗೊಳ್ಳುವ ನಮ್ಮ ಆದ್ಯ ಕರ್ತವ್ಯ ಆ ನಿಟ್ಟಿನಲ್ಲಿ ಇಂದು ಕೊಟ್ಟೂರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮತದಾರರಿಗೆ ಧೈರ್ಯ ತುಂಬುವ ಕೆಲಸ ಮಾಡಿ ಮತ್ತು ನಮ್ಮ ಸಂವಿಧಾನ ನೀಡಿದ ಹಕ್ಕನ್ನು ಚಲಾಯಿಸಬೇಕು ಎಂದು ವಿಕಾಸ್ ಲಮಾಣಿ ಸರ್ಕಲ್ ಇನ್ಸ್ಪೆಕ್ಟರ್ ತಿಳಿಸಿದರು.

ಈ ಪಥ ಸಂಚಲನವನ್ನು ಸೌಮ್ಯವಿಕ್ರಂ ರಾಕೇಶ್ ಬಸವರಾಜ್ ಸೋಮಣ್ಣ ಮಣಿಕಂಠ ಇನ್ನು ಮುಂತಾದ ಯುವಕರು ಹಾಗೂ ಮುಖಂಡರು ಸೇರಿ ಸ್ವಾಗತವನ್ನು ಬಯಸಿದರು.

ಈ ಸಂದರ್ಭದಲ್ಲಿ ಚಂದ್ರಮೌಳಿ, ಬಸವರಾಜ್, ಎರಿಸ್ವಾಮಿ,ವಿಷ್ಣುವರ್ಧನ, ರೇವಣಸಿದ್ದಪ್ಪ ಹಾಗೂ ಇನ್ನು ಮುಂತಾದ ಸಿಬ್ಬಂದಿ ವರ್ಗವೂ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಅಮಲಾಪುರ ಶ್ರೀ ಬಸವೇಶ್ವರ ರಥೋತ್ಸವ ಸಂಭ್ರಮ



**ಅಮಲಾಪುರ** : ಕೂಡ್ಲಿಗಿ ತಾಲೂಕಿನ ಅಮಲಾಪುರ ಗ್ರಾಮದ ಶ್ರೀ ಶರಣ ಬಸವೇಶ್ವರ ಸ್ವಾಮಿಯ ರಥೋತ್ಸವವು ನೂರಾರು ಭಕ್ತರ ಹರ್ಷೋದ್ಗಾರ ದೊಂದಿಗೆ ಗುರುವಾರ ಸಂಜೆ ಸಂಭ್ರಮ ಸಡಗರದಿಂದ ನೆರವೇರಿತು. ರಥೋತ್ಸವದ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ಮಹಾ ರುದ್ರಾಭಿಷೇಕ, ನೂರೊಂದು ಬಿಲ್ವಾರ್ಚನೆ, ಅಲಂಕಾರ ಪೂಜೆ ಮುಂತಾದ ಧಾರ್ಮಿಕ ಕಾರ್ಯಗಳು ನಡೆದವು, ಸಂಜೆಯಾಗುತ್ತಿದ್ದಂತೆ ದೇವಸ್ಥಾನದಿಂದ ಪಲ್ಲಕ್ಕಿ ಉತ್ಸವದಲ್ಲಿ ಉತ್ಸವ ಮೂರ್ತಿಯನ್ನು ಕರೆತಂದು ರಥೋತ್ಸವದಲ್ಲಿ ಪ್ರತಿಷ್ಠಾಪಿಸಲಾಯಿತು. ಸ್ವಾಮಿ ರಥವೇರುತ್ತಿದ್ದಂತೆ ನರದಿದ್ದ ಭಕ್ತರು ಜಯ ಘೋಷಣೆ ಮುಳುಗಿಸಿದರು. ರಥ ಮುಂದೆ ಸಾಗುತ್ತಿದ್ದಂತೆ ಉತ್ತತ್ತಿ ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ಈ ವೇಳೆ ಶ್ರೀ ಬಸವೇಶ್ವರ ಸ್ವಾಮಿಯ ಹೂವಿನ ಹರಾಜಿನಲ್ಲಿ 30101 ರೂ,ಗೆ ಕೆ.ಜಿ ಶ್ರೀನಿವಾಸ್ ಗೌಡ ಹೊಸಹಳ್ಳಿ ಇವರು ಪಡೆದು ಕೊಂಡರು. ಈ ವೇಳೆ ಕೂಡ್ಲಿಗಿ ಹಿರೇಮಠ ಸಂಸ್ಥಾನದ ಪೀಠಾಧ್ಯಕ್ಷ ಪ್ರಶಾಂತಸಾಗರ ಸ್ವಾಮೀಜಿ, ಕೊಟ್ಟೂರಿನ ಹಿರೇಮಠದ ಯೋಗಿ ರಾಜೇಂದ್ರ ಶಿವಾಚಾರ್ಯ, ಕಾನಮಡುಗು ದಾಸೋಹ ಮಠದ ಧರ್ಮಾಧಿಕಾರಿ ದಾ.ಮ ಐಮಡಿ ಶರಣಾರ್ಯರು ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ನಡೆದೆವು. ಈ ರಥೋತ್ಸವಕ್ಕೆ ಜನಪ್ರತಿನಿಧಿಗಳು, ಮುಖಂಡರು, ಗ್ರಾ.ಪಂ ಸದಸ್ಯರು, ಸುತ್ತ ಮುತ್ತಲಿನ ಗ್ರಾಮಸ್ಥರು ಸದ್ಭಕ್ತರು ಭಾಗವಹಿಸಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್.ಕಾನಾ ಹೊಸಹಳ್ಳಿ**

## ಗ್ಯಾರಂಟಿಗಳ ಯೋಜನೆಗಳಿಂದ ಸ್ವಾಭಿಮಾನದ ಬದುಕು ಲಭಿಸಿದೆ



**ರಬಕವಿ-ಬನಹಟ್ಟಿ** : ರಾಜ್ಯ ಸರ್ಕಾರ ಮಹಿಳೆಯರಿಗೆ ನೀಡಿರುವ ಗ್ಯಾರಂಟಿ ಯೋಜನೆಗಳಿಂದ ಮಹಿಳೆ ಆರ್ಥಿಕವಾಗಿ ಸಬಲಗೊಂಡು ಸ್ವಾಭಿಮಾನದ ಬದುಕನ್ನು ನಡೆಸುತ್ತಿದ್ದಾಳೆ ಎಂದು ಜಿಲ್ಲಾ ಪಂಚಾಯಿತ್ತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ತಿಳಿಸಿದರು.

ಭಾನುವಾರ ಇಲ್ಲಿನ ಈಶ್ವರಲಿಂಗ ಮೈದಾನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಾರಿಶಕ್ತಿ ಸಮಾವೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ದಾಪುಗಾಲಿಡುತ್ತಿದ್ದು , ಮಹಿಳಾ ಅಭ್ಯುದಯಕ್ಕೆ , ದೀನ-ದಲಿತ, ಅಲ್ಪಸಂಖ್ಯಾತ ಬಡ ಕುಟುಂಬಗಳಿಗೆ ರಾಜ್ಯ ಸರ್ಕಾರ ಸಾಕಷ್ಟು ಶ್ರಮಿಸುತ್ತಿದೆ. ಬಾಗಲಕೋಟ ಲೋಕಸಭಾ ಕ್ಷೇತ್ರದಲ್ಲಿ ನಿರೀಕ್ಷಿತ ಅಭಿವೃದ್ಧಿ ಮಾಡುವಲ್ಲಿ ಸಧ್ಯದ ಸಂಸದರು ವಿಫಲರಾಗಿದ್ದು , ಅವರದೇ ಸರ್ಕಾರವಿದ್ದರೂ ಅಭಿವೃದ್ಧಿ ಮರೀಚಿಕೆಯಾಗಿದೆ. ಬಡವರ ಬಡತನ ದೂರಾಗಿ ನೆಮ್ಮದಿಯ ಬದುಕು ರೂಪಿಸುವಲ್ಲಿ ಕಾಂಗ್ರೆಸ್ ಪಕ್ಷ ಬದ್ಧವಾಗಿದ್ದು , ಈ ಹಿನ್ನೆಲೆಯಲ್ಲಿ ಬಾಗಲಕೋಟ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ನೀಡಲು ನಾನೂ ಆಕಾಂಕ್ಷಿಯಾಗಿದ್ದು , ಕ್ಷೇತ್ರದ ಜನತೆ ನನಗೆ ಖಂಡಿತ ಆಶೀರ್ವದಿಸುವ ನಂಬಿಕೆ ನನಗಿದೆ. ಕ್ಷೇತ್ರದ ಪ್ರಗತಿಗೆ ಬದ್ಧಳಾಗಿರುವ ನನಗೆ ಈ ಬಾರಿ ಅವಕಾಶ ದೊರೆತಲ್ಲಿ ಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸುವುದಾಗಿ ಭರವಸೆಯಿತ್ತರು.


ಎ.ಐ.ಸಿ.ಸಿ. ವಕ್ತಾರೆ ಬೆಂಗಳೂರಿನ ಭವ್ಯ ನರಸಿಂಹಮೂರ್ತಿ ಮಾತನಾಡುತ್ತ , ವೀಣಾ ಕಾಶಪ್ಪನವರ ಅವರು ಮುಂಬರುವ ಲೋಕಸಭೆಗೆ ಬಾಗಲಕೋಟೆ ಮತಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾದರೆ ಅವರನ್ನು ಗೆಲ್ಲಿಸುವ ಜವಾಬ್ದಾರಿ ಇಲ್ಲಿಯ ಮಹಿಳೆಯರ ಮೇಲಿದೆ. ಈ ಬಾರಿ ವೀಣಾ ಅವರನ್ನು ಗೆಲ್ಲಿಸುತ್ತಾರೆ. ಕಾಂಗ್ರೆಸ್ ಸರ್ಕಾರ ನೀಡಿದ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನರು ನೆಮ್ಮದಿಯ ಬದುಕನ್ನು ಬದುಕುತ್ತಿದ್ದಾರೆ.ರಾಜ್ಯಸರ್ಕಾರನುಡಿದಂತೆ ನಡೆದ ಸರ್ಕಾರವಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಸಿದ್ದೂ ಕೊಣ್ಣೂರ, ಸಂಗಪ್ಪ ಕುಂದಗೋಳ, ನೀಲಕಂಠ ಮುತ್ತೂರ ಮಾತನಾಡಿದರು.

ಮಹಿಳಾ ದಿನಾಚರಣೆ ಅಂಗವಾಗಿ ವೀಣಾ ಕಾಶಪ್ಪನವರ ಈ ಸಂದರ್ಭದಲ್ಲಿ 1,111 ಜನ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಮ್ಮಿಕೊಂಡು ಮಹಿಳಾ ಸಾಧಕಿಯರನ್ನು ಸನ್ಮಾನಿಸಿದರು.

ರಾಜೇಂದ್ರ ಸುಭಾಸ ಭದ್ರನವರ, ಭೀಮಶಿ ಮಗದುಮ್, ಮಹಾಲಿಂಗ ಮುಧೋಳ, ಲಕ್ಷ್ಮಣ ದೇಸಾರಟ್ಟಿ, ಮಲ್ಲಪ್ಪ ಸಿಂಗಾಡಿ, ಶಂಕರ ಕೆಸರಗೊಪ್ಪ, ರಾಹುಲ್ ಕಲಾಲ, ಕವಿತಾ ಕೊಣ್ಣೂರ, ರೇಣುಕಾ ಮಡ್ಡಿಮನಿ, ವಿದ್ಯಾ ಬಿಳ್ಳೂರ, ಆಯೇಷಾ ಫಣಿಬಂದ್, ಮಹಾನಂದಾ ಅಮರಾಪುರ, ಗೀತಾ ಕಾವೇರಿ, ಲಲಿತಾ ನಂದೆಪ್ಪನವರ, ಕಿರಣ ಕರಲಟ್ಟಿ, ನಾರಾಯಣ ನಿಕ್ಕಂ, ಸತ್ಯಪ್ಪ ಮಗದುಮ್, ಹಾರೂನ್ ಬೇವೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಕಾಡಸಿದ್ಧೇಶ್ವರ ಸೊಸೈಟಿ: ಅಧ್ಯಕ್ಷರಾಗಿ ಕಾಡದೇವರ, ಉಪಾಧ್ಯಕ್ಷರಾಗಿ ಮಂಡಿ ಅವಿರೋಧ ಆಯ್ಕೆ



**ರಬಕವಿ-ಬನಹಟ್ಟಿ** : ಸುಮಾರು ಎಂಟು ದಶಕಗಳ ಇತಿಹಾಸ ಹೊಂದಿರುವ ಪ್ರಪ್ರಥಮ ನೇಕಾರರ ಸಂಘವಾಗಿರುವ ಶ್ರೀ ಕಾಡಸಿದ್ಧೇಶ್ವರ ವಿದ್ಯುತ್ಚಾಲಿತ ಮಗ್ಗಗಳ ಸಹಕಾರಿ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಶಂಕರಯ್ಯ ಕಾಡದೇವರ, ಉಪಾಧ್ಯಕ್ಷೆಯಾಗಿ ಶ್ರೀಮತಿ ಮಂಜುಳಾ ರಮೇಶ ಮಂಡಿ ಅವಿರೋಧವಾಗಿ ಆಯ್ಕೆಗೊಂಡರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಅಧ್ಯಕ್ಷ ಕಾಡದೇವರ, ನೇಕಾರರ ನೇತಾರ ದಿವಂಗತ ಪಿ. ಎಂ. ಬಾಂಗಿಯವರು ಕಟ್ಟಿ ಬೆಳೆಸಿದ ಈ ಸಹಕಾರಿ ಸಂಘವು ಉತ್ತುಂಗದ ಶಿಖರದಲ್ಲಿದೆ. ಯಾವುದೇ ಚ್ಯುತಿ ತರದೆ ನೇಕಾರ ಸಮುದಾಯದ ಏಳ್ಗೆಗೆ ಅನುಕೂಲವಾಗುವ ದಿಶೆಯಲ್ಲಿ ಶ್ರಮಿಸುವುದಾಗಿ ತಿಳಿಸಿದರು.

ಹನ್ನೆರಡು ಜನ ಸದಸ್ಯರನ್ನು ಹೊಂದಿದ ಸಂಘದಲ್ಲಿ ಚುನಾವಣೆ ಸಂದರ್ಭ ಹತ್ತು ಜನ ನಿರ್ದೇಶಕರು ಮಾತ್ರ ಹಾಜರಿದ್ದು , ಶೇಖರ ಹಕ್ಕಲದಡ್ಡಿ ಹಾಗು ವಿಲಾಸ ಪೂಜಾರಿ ಗೈರು ಹಾಜರಿ ಎದ್ದು ಕಾಣುತ್ತಿತ್ತು. ಉಪಾಧ್ಯಕ್ಷೆ ಮಂಜುಳಾ ರಮೇಶ ಮಂಡಿ ಮಾತನಾಡಿ, ರಾಜು ಅಂಬಲಿಯವರ ಬಣಕ್ಕೆ ಆಶೀರ್ವಾದ ಮಾಡುವ ಮೂಲಕ ಶೇರುದಾರರು ನಮ್ಮನ್ನು ಕಾರ್ಯನಿರ್ವಹಣೆಗೆ ಅವಕಾಶ ನೀಡಿದ್ದಾರೆ. ಇದಕ್ಕೆ ಚಾಚೂ ತಪ್ಪದೆ ಪ್ರಾಮಾಣಿಕತೆಯಿಂದ ಮುಂದಿನ ಐದು ವರ್ಷಗಳ ಅವಧಿಯಲ್ಲಿ ವಿಶೇಷ ಯೋಜನೆಗಳನ್ನು ಎಲ್ಲ ನಿರ್ದೇಶಕರ ಸಹಕಾರದೊಂದಿಗೆ ಜಾರಿಗೊಳಿಸುವ ಮೂಲಕ ನೇಕಾರರ ಪರ ಸೇವೆಗೈಯುವದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ರಾಜೇಂದ್ರ ಅಂಬಲಿ, ಶಂಕರ ಸೋರಗಾಂವಿ, ಮಲ್ಲು ಬಾಣಕಾರ, ರಾಜೇಂದ್ರ ಭದ್ರನ್ನವರ, ಕುಮಾರ ಕದಂ, ಪ್ರವೀಣ ಕೋಲಾರ, ರಮೇಶ ಮಂಡಿ, ಬಸವರಾಜ ಪಾಟೀಲ, ಷಣ್ಮುಖ ಹನಗಂಡಿ, ಸುರೇಶ ಭಜಂತ್ರಿ, ನಿರ್ದೇಶಕರಾದ ಅಶೋಕ ಬಾಣಕಾರ, ಈರಪ್ಪ ಬರಗಲ್, ಶಂಕರ ಕೆಸರಗೊಪ್ಪ, ಚನಮಲ್ಲಪ್ಪ ಬೀಳಗಿ, ಶಶಿಧರ ಬೀಳಗಿ, ಮೋಹನ ಬೀಳಗಿ, ಆನಂದಯ್ಯ ರೇವಣಸಿದ್ದಯ್ಯಗೋಳ, ಅಶ್ವಿನಿ ಈಶ್ವರ ಅಂಬಲಿ, ಚುನಾವಣಾಧಿಕಾರಿ ಟಿ. ಎಂ. ಮಾಳಿ ಹಾಜರಿದ್ದರು.

## ಡಾ. ಬಾಬು ಜಗಜೀವನರಾಂ ಭವನವನ್ನು ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಪಯೋಗಿಸಲು ಡಿ.ಎಚ್.ಎಸ್ ಒತ್ತಾಯ



**ಹೊಸಪೇಟೆ** : ಹೊಸಪೇಟೆಯ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಭರವಸೆ ಹಿನ್ನೆಲೆಯಲ್ಲಿ ದಿನಾಂಕ 16.3.2024 ರಿಂದ ನಡೆಯಲಿದ್ದ ಪ್ರತಿಭಟನೆಯನ್ನ ಮುಂದೂಡಲಾಗಿದೆ. ದಿನಾಂಕ 27.2.2021ರಂದು ಉದ್ಘಾಟಿಸಿದ್ದ ಡಾ!! ಬಾಬು ಜಗಜೀವನರಾಮ್ ಭವನವನ್ನು ದಲಿತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಪಯೋಗಿಸುವ ಬದಲು ಸರಕಾರಿ ಕಛೇರಿಗಳಿಗೆ ಉಪಯೋಗಿಸುತ್ತಿರುವುದನ್ನು ಪ್ರತಿಭಟಿಸಿ ದಿನಾಂಕ 16.3.2024 ರಿಂದ ಪ್ರತಿಭಟನೆ ನಡೆಸಲು ತೀರ್ಮಾನ ಮಾಡಿದ್ದ ದಲಿತ ಹಕ್ಕುಗಳ ಸಮಿತಿಯ (ಆಊಖ)ಹೊಸಪೇಟೆ ತಾಲೂಕಿನ ಘಟಕವು, ಇಂದು ಪೂರ್ವಭಾವಿಯಾಗಿ ಜಿಲ್ಲಾ ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಯಿತು.

ತಾತ್ಕಾಲಿಕವಾಗಿ ಜಿಲ್ಲಾ ಸಮಾಜಕಲ್ಯಾಣ ಇಲಾಖೆಯ ಕಛೇರಿ ನಡೆಸುತ್ತಿದ್ದೇವೆ. ಈಗಾಗಲೆ ಸಮಾಜ ಕಲ್ಯಾಣ ಇಲಾಖೆಯ ಪ್ರತ್ಯೇಕ ಕಟ್ಟಡದ ಕೆಲಸ ಮುಗಿದ ನಂತರ ದಲಿತರ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಆಊಖ ತನ್ನ ಪ್ರತಿಭಟನೆಯನ್ನು ಮುಂದೂಡಿದೆ.

ಇಂದಿನ ಚರ್ಚೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಮಂಜುನಾಥ, ಜಿಲ್ಲಾ ಅಧ್ಯಕ್ಷರಾದ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು ಈ ಸಂದರ್ಭದಲ್ಲಿ ಆಖಖ ಮುಖಂಡರು ಎಂ.ಜಂಬಯ್ಯನಾಯಕ, ಜಿಲ್ಲಾ ಉಪಾಧ್ಯಕ್ಷರಾದ ಬಿ.ತಾಯಪ್ಪನಾಯಕ, ತಾಲೂಕು ಅಧ್ಯಕ್ಷ ಎಂ.ಧನರಾಜ್ ,ಕಾರ್ಯದರ್ಶಿಯಾದ ಬಿ.ರಮೇಶ್ ಕುಮಾರ್,ಸಂಘಟನಾ ಕಾರ್ಯದರ್ಶಿಯಾದ ಸೂರ್ಯ ನಾರಾಯಣ ಮಾದಿಗ ಮತ್ತು ಕ್ರಿಷ್ಣಪ್ಪ ಮಾಸ್ತರ್ ಭಾಗವಹಿಸಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಲತಾ ಹೆಗಡೆ ಅವರ ಸನ್ಮಾನ



**ಬೆಂಗಳೂರು** : ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಎಸ್. ಎಸ್. ಕಲಾಸಂಗಮ ವತಿಯಿಂದ ಇವರು ಹೆಸರಾಂತ ಸಾಹಿತಿ ಮತ್ತು ಚಿಂತಕಿ ಶ್ರೀಮತಿ ಲತಾ ಕೆ. ಎಸ್. ಹೆಗಡೆ ಅವರನ್ನು ಮಲ್ಲೇಶ್ವರಮ್ ನ ಆಡಿಟೋರಿಯಂನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶುಕ್ರವಾರ "ಗೋಲ್ಡನ್ ಸ್ಟಾರ್ ಮಹಿಳಾ ಪ್ರಶಸ್ತಿ 2024" ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸ್ಮೈಲ್ ಶಿವು, ಶಶಿಧರ ಕೋಟೆ ಮುಂತಾದ ಗಣ್ಯರ ಉಪಸ್ಥಿತರಿದ್ದರು.

# ಸರ್ವಧರ್ಮ ಸದ್ಭಾವನಾ ಸಮಾರಂಭ: ಭಾವೈಕ್ಯತಾ ಪ್ರಶಸ್ತಿ ಪ್ರದಾನ

**ವರದಿ : ಲಾಲಸಾಬ ಸವಾರಗೋಳ**

**ವಿಜಯಪುರ :** ಮೌಢ್ಯ, ಕಂದಾಚಾರಗಳನ್ನು ಹೊಡೆದೋಡಿಸಿ, ಸರ್ವರನ್ನು ಸಮಾನವಾಗಿ ಕಾಣುವುದೇ ಪ್ರತಿ ಧರ್ಮದ ನೈಜ ತತ್ವವಾಗಿದೆ ಎಂದು ಯರನಾಳ ವಿರಕ್ತಮಠದ ಗುರುಸಂಗನ ಬಸವ ಮಹಾಸ್ವಾಮಿಜಿಗಳು ಹೇಳಿದರು.
ಕೊಲ್ಹಾರ ಪಟ್ಟಣದಲ್ಲಿ ಗುರುವಾರ ಇಪ್ಪತ್ತನೇ ಶತಮಾನದ ಸೂಫಿ ಸಂತ ಗುರು ಅಲಹಾಜ್ ಶಾಹ ಮಹಮ್ಮದ್ ಅಬ್ದುಲ್ ಗಫಾರ್ ಖಾದ್ರಿ ಅವರ ಉರುಸಿನ ನಿಮಿತ್ಯ ಜರುಗಿದ ಸರ್ವಧರ್ಮ ಸದ್ಭಾವನಾ ಸಮಾರಂಭ ಹಾಗೂ ಭಾವೈಕ್ಯತಾ ಪ್ರಶಸ್ತಿ ಪ್ರದಾನ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕು ಸಾಗಿಸಬೇಕು. ರಾಜಕೀಯದ ಕುತಂತ್ರದಿಂದ ಪ್ರಸ್ತುತ ವಾತಾವರಣ ಜಟಿಲವಾಗುತ್ತಿದೆ. ಮುಗ್ಧ ಜನರು ಆಮಿಷಕ್ಕೆ ಬಲಿಯಾಗದೆ, ಒತ್ತಡಗಳಿಗೆ ಒಳಗಾಗದೇ ಪ್ರೇರಣಾದಾಯಕ ಬದುಕು ಸಾಗಿಸಬೇಕು ಎಂದು ಅವರು ಹೇಳಿದರು.
ಬೇಲೂರು ಹಾಗೂ ಕೊಲ್ಹಾರ ಹಿರೇಮಠದ ಪ್ರಭುಕುಮಾರ ಶಿವಾಚಾರ್ಯರು ಮಾತನಾಡುತ್ತಾ ಮನುಕುಲದ ಏಳ್ಗೆ ಬಯಸುವುದೇ ಸರ್ವಧರ್ಮಗಳ ಮೂಲ ಉದ್ದೇಶವಾಗಿದೆ. ಸಂತರ, ಶರಣರ, ಸೂಫಿಗಳ ನಾಡಾಗಿರುವ ಈ ಭಾರತ ದೇಶ ಸರ್ವರನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡು ಸಲಹುತ್ತಿದೆ



ಎಂದರು. ಪಟ್ಟಣದಲ್ಲಿ ಮುಸ್ಲಿಂ ಧರ್ಮಗುರುಗಳಾಗಿ ಪ್ರಸಿದ್ಧಿ ಪಡೆದಿರುವ ಡಾ. ಬಕ್ತೀಯಾರ್ ಖಾನ್ ಪಠಾಣ ಭಾವೈಕ್ಯತಾ ಸಮಾವೇಶ ಹಮ್ಮಿಕೊಂಡು ನಾಡಿಗೆ ಭಾವೈಕ್ಯತೆಯ ಸಂದೇಶ ಸಾರುತ್ತಿದ್ದಾರೆ. ಅವರ ಕಾರ್ಯ ಶ್ಲಾಘನೀಯ ಎಂದರು.
ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ ಮಾತನಾಡಿ ಸಾವಿರಾರು ವರ್ಷಗಳ ಇತಿಹಾಸ ಪರಂಪರೆ ಹೊಂದಿರುವ ಭಾರತ ದೇಶದಲ್ಲಿ ಸರ್ವ ಧರ್ಮಗಳು ಪರಸ್ಪರ ಸಹೋದರತ್ವದಿಂದ ಬೆಸೆದುಕೊಂಡಿವೆ. ಸಂತ ಶರಣರ ಸೂಫಿಗಳ ಸಮಾಗಮವೇ ಈ ಭವ್ಯ ಭಾರತ. ಸರ್ವರು ದೇಶದ ಚರಿತ್ರೆಯನ್ನ, ಮಹತ್ವವನ್ನ ಅರಿಯಬೇಕಿದೆ. ದೇಶದ ವಿಷಯದಲ್ಲಿ ತಪ್ಪು ಯಾರೇ ಮಾಡಿರಲಿ ಅದನ್ನು ತೀಕ್ಷ್ಣವಾಗಿ ಖಂಡಿಸಬೇಕು ಎಂದರು.
ಅಮಾನತ್ ಬ್ಯಾಂಕಿನ ಅಧ್ಯಕ್ಷ ಸಲೀಂ ಅತ್ತಾರ ಮಾತನಾಡುತ್ತಾ ಪ್ರಸ್ತುತ ಭಾವೈಕ್ಯತೆಯ ಸಂದೇಶ ಸಾರುವುದು ಅತ್ಯಂತ ಅವಶ್ಯಕವಾಗಿದೆ ಎಂದರು.
ಭಾರತ ದೇಶ ಸರ್ವ ಧರ್ಮೀಯರನ್ನು ತನ್ನ ಮಡಿಲಲ್ಲಿಟ್ಟುಕೊಂಡು ತೂಗುತ್ತಿದೆ.
ಇದು ಸಂತರ ನಾಡು, ಶರಣರ ನಾಡು, ಸೂಫಿಗಳ ನಾಡು. ನಾವೆಲ್ಲರೂ ಪರಸ್ಪರರು ಒಂದೇ ತಾಯಿಯ ಮಕ್ಕಳಂತೆ ಬದುಕಬೇಕಿದೆ ಎಂದು ಹೇಳಿದರು.
ಭಾವೈಕ್ಯತಾ ಪ್ರಶಸ್ತಿ: ಜಾನಪದ ವಿದ್ವಾಂಸ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಂಭು ಬಳಿಗಾರ ಅನುಪಸ್ಥಿತಿಯಲ್ಲಿ ಅವರ ಧರ್ಮಪತ್ನಿ ಶ್ರೀಮತಿ ಪ್ರೇಮಾ ಶಂಭು ಬಳಿಗಾರ ಅವರಿಗೆ ಪ್ರಸಕ್ತ ವರ್ಷದ ಅಲಹಾಬಾದ್ ಮೌಲಾನಾ ಭಾವೈಕ್ಯತಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.
ಈ ಸಂದರ್ಭದಲ್ಲಿ ಸಾನಿಧ್ಯ ವಹಿಸಿದ್ದ ನಿವೃತ್ತ ಪ್ರಾಂಶುಪಾಲರಾದ ಸಯ್ಯದ ಬಹಾವೊದ್ದಿನ ಸದರಕಾಜಿ, ಅಧ್ಯಕ್ಷತೆ ಅಲ್ಹಾಜ ಡಾ. ಬಖ್ತಿಯಾರಖಾನ ಕಾದ್ರಿ ಉತ್ತರಾಧಿಕಾರಿಗಳು ಖಾನಕಾಯೇ ಗಫ್ಫಾರಿಯಾ, ಮಾಜಿ ಸಚಿವ ಎಸ್. ಆರ್. ಪಾಟೀಲ್, ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ , ಸಂಶೋಧಕರಾದ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ, ಉಸ್ಮಾನ್ ಪಟೇಲ್ ಖಾನ್, ಐ. ಎನ್. ತಹಸಿಲ್ದಾರ, ಸಿ. ಎಂ. ಗಣಕುಮಾರ, ನಂದಬಸಪ್ಪ ಚೌಧರಿ, ಈರಣ್ಣಗೌಡ ಕೋಮಾರ, ಬಸವರಾಜ ಎಸ್. ಹಂಗರಗಿ, ಅಲ್ಹಾಜ ಕಾಶೀಮಸಾಬ ಗಿರಗಾಂವಿ, ಮಲ್ಲು ದೇಸಾಯಿ, ಅಲ್ಹಾಜ ಎಚ್. ಕೆ. ಚೌಧರಿ, ಎಮ್. ಎಚ್. ಕೂಡಗಿ, ಬಿ. ಡಿ. ಕಲಾದಗಿ, ಹಟೇಲಸಾಬ ಕಂಕರಪೀರ, ಈರಣ್ಣ ಔರಸಂಗ ಸಹಿತ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.
ಹಾಜಿ ಅಯ್ಯೂಬ್ ಖಾನ್ ಪಠಾಣ ಪ್ರಾಸ್ತಾವಿಕವಾಗಿ ಮಾತನಾಡಿದರು.
ಪತ್ರಕರ್ತ ಪರಶುರಾಮ ಗಣಿ ನಿರೂಪಿಸಿದರು.
ಖುದಾದಖಾನ್ ಪಠಾಣ ಸ್ವಾಗತಿಸಿದರು.

## ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಿಗೆ ಜಿ.ಪಂ. ಸಿಇಓ ರಿಷಿ ಆನಂದ ಭೇಟಿ



**ವಿಜಯಪುರ :** ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿರುವ ವಿಜಯಪುರ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ದರ್ಬಾರ್ ಪದವಿ ಪೂರ್ವ ಕಾಲೇಜಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ರವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.
ಗುರುವಾರ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದ ಅವರು, ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಹಾಜರಾತಿ ಕುರಿತು ಕಾಲೇಜಿನ ಪ್ರಾಚಾರ್ಯರೊಂದಿಗೆ ಚರ್ಚಿಸಿದರು. ವಿ ಬಿ ದರ್ಬಾರ್ ಕಾಲೇಜಿಗೆ ಭೇಟಿ ನೀಡಿ ಪರೀಕ್ಷಾ ಕೊಠಡಿಗಳನ್ನು ವೀಕ್ಷಣೆ ಮಾಡಿದರು
ಈ ಸಂದರ್ಭದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಬಸವರಾಜ, ದರ್ಬಾರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ತಿರುಮಲ ಕುಲಕರ್ಣಿ ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

## ವಿಜಯನಗರ ಕಾಲದ ಇತಿಹಾಸ ಸಾರಲಿದೆ ಉತ್ಸವ: ಜನಾರ್ದನರೆಡ್ಡಿ
## ಆನೆಗೊಂದಿ ಉತ್ಸವ: ಮೂರು ದಿನಗಳ ಕ್ರೀಡಾಕೂಟಕ್ಕೆ ಚಾಲನೆ

**ಗಂಗಾವತಿ :** ಆನೆಗೊಂದಿ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಆನೆಗೊಂದಿ ಉತ್ಸವದ ನಿಮಿತ್ತ ಶುಕ್ರವಾರ ಸಂಜೆ ನಡೆದ ಕ್ರೀಡಾಕೂಟವನ್ನು ಐಸ್ಟಾಕ್ ಗೇಮ್ ಅಂತರರಾಷ್ಟ್ರೀಯ ಕ್ರೀಡಾಪಟು ಪ್ರಗತಿ ಎಂ. ಹುಡೇದ್ ಅವರು ಉದ್ಘಾಟಿಸಿದರು.
ನಂತರ ಮಾತನಾಡಿ, ಸಾಧನೆ ಸಾಧಕರ ಸೊತ್ತು. ವಿದ್ಯಾರ್ಥಿನಿಯರು ಶಿಕ್ಷಣದ ಜೊತೆಗೆ ಕ್ರೀಡಾಸಕ್ತಿ ಸಹ ಬೆಳಸಿಕೊಳ್ಳಬೇಕು. ಪಾಲಕರು ಸಹ ಹೆಣ್ಣುಮಕ್ಕಳಲ್ಲಿನ ಕ್ರೀಡಾ ಪ್ರತಿಭೆ ತಿಳಿದು, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಪ್ರೋತ್ಸಾಹಿಸಬೇಕು ಎಂದರು.
ಶಾಸಕ ಜಿ.ಜನಾರ್ದನರೆಡ್ಡಿ ಮಾತನಾಡಿ, ಆನೆಗೊಂದಿ ಉತ್ಸವದಲ್ಲಿ ವಿಜಯನಗರ ಕಾಲದ ಬಗ್ಗೆ ಗತವೈಭವ ಸಾರಿ, ಮುಂದಿನ ಪಿಳಿಗೆಗೆ ಇತಿಹಾಸ ತಿಳಿಸಲಾಗುವುದು. ಈ ನಿಟ್ಟಿನಲ್ಲಿ ಆನೆಗೊಂದಿ ಉತ್ಸವವನ್ನು ಕಡಿಮೆ ಅವಧಿಯಲ್ಲಿ ಆಯೋಜನೆ ಮಾಡಿ, ತ್ವರಿತಗತಿಯಲ್ಲಿ ಸಿದ್ದತೆ ನಡೆಸಲಾಗಿದೆ ಎಂದರು. ಮೂರು ದಿನಗಳ ಕಾಲ ವಾಲಿಬಾಲ್, ಕಬಡ್ಡಿ, ಹ್ಯಾಂಡ್ ಬಾಲ್, ರಂಗೋಲಿ ಸ್ಪರ್ಧೆ, ಕುಸ್ತಿ, ವಿಶೇಷಚೇತನರ ಕಬಡ್ಡಿ, ಹಗ್ ಗಜಗ್ಗಾಟ ಸೇರಿ ಹಲವು ಕ್ರೀಡಾಕೂಟಗಳು ನಡೆಯಲಿದ್ದು, ನಾನು ಸಹ ಸಾಮಾನ್ಯ ವ್ಯಕ್ತಿಯಂತೆ ಕ್ರೀಡೆ ವೀಕ್ಷಿಸಿ ಆನಂದಿಸುತ್ತೇನೆ. ಆನೆಗೊಂದಿ ಉತ್ಸವ ನನ್ನ ನೇತೃತ್ವದಲ್ಲಿ ನಡೆಯುತ್ತಿರುವುದು ನನ್ನ ಪೂರ್ವಜನ್ಮದ ಪುಣ್ಯ ಎಂದರು.
ಉತ್ಸವದ ಮೊದಲ ದಿನ ಚಿತ್ರನಟ ಧೃವಸರ್ಜಾ ಅವರು ಆಂಜನೇಯ ಹಾಡುಗಳಿಗೆ ನೃತ್ಯ, ಹಂಸಲೇಖ ಅವರಿಂದ ರಾಮಾಯಣ ಕಾಲದ ಕುರಿತ ಕಥಾರೂಪದ ಸನ್ನಿವೇಶ,



ನೃತ್ಯಗಳು ಜರುಗಲಿವೆ. ಎರಡನೇ ದಿನ ಚಿತ್ರನಟ ಶ್ರೀಮುರಳಿ, ಅರ್ಜುನ್ ಜನ್ಯ ಅವರಿಂದ ಸಂಗೀತಾ ಕಾರ್ಯಕ್ರಮ ಸೇರಿ ಹಲವು ಮನೋರಂಜನಾ ಕಾರ್ಯಕ್ರಮಗಳು ಜರುಗಲಿವೆ ಎಂದರು. ನಂತರ ಶಾಸಕರು ಹೊನಲು ಬೆಳಕಿನ ಪುರುಷರ ವಾಲಿಬಾಲ್ ಪಂದ್ಯಾವಳಿಗಳಿಗೆ ಚಾಲನೆ ನೀಡಿದರು. ಈ ವಾಲಿಬಾಲ್ ಪಂದ್ಯಾವಳಿ ಸ್ಪರ್ಧೆಗೆ ಕೊಪ್ಪಳ, ಗಂಗಾವತಿ, ಬೆಂಗಳೂರು, ರಾಯಚೂರು, ವಿಜಯನಗರ, ಸಂಡೂರು, ಸೇರಿ ವಿವಿಧ ಜಿಲ್ಲೆ, ತಾಲ್ಲೂಕುಗಳಿಂದ 18 ಪುರುಷರ ತಂಡ, 6 ಮಹಿಳಾ ತಂಡಗಳು ಆಗಮಿಸಿದ್ದವು.
ಅರುಣಾಲಕ್ಷ್ಮಿ ಜಿ.ಜನಾರ್ದನರೆಡ್ಡಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್‌ಮಹೇಶಮಾಲಗಿತ್ತಿ,ತಹಶೀಲ್ದಾರ್‌ಯು.ನಾಗರಾಜ, ಡಿವೈಎಸ್ಪಿಸಿದ್ದಲಿಂಗಪ್ಪಗೌಡ ಪೋಲಿಸ್‌ಪಾಟೀಲ,ನಗರಸಭೆ ಪೌರಾಯುಕ್ತ ಆರ್.ವಿರೂಪಾಕ್ಷಮೂರ್ತಿ, ತಾ.ಪಂ ಇಒ ಲಕ್ಷ್ಮೀದೇವಿ, ಆನೆಗೊಂದಿ ಗ್ರಾ.ಪಂ ಅಧ್ಯಕ್ಷೆ ಮಹಾದೇವಿ, ಉಪಾಧ್ಯಕ್ಷೆ ಪೂರ್ಣಿಮಾ, ಸದಸ್ಯ ತಿಮ್ಮಪ್ಪ ಬಾಳೆಕಾಯಿ, ವೆಂಕಟೇಶಬಾಬು ಸೇರಿ ಕ್ರೀಡಾ ಇಲಾಖೆ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.
ರಾಮಾಯಣ ಕಾಲದ ಚಿತ್ರಗಳ ತಯಾರಿ: ಆನೆಗೊಂದಿ ಉತ್ಸವದ ಮುಖ್ಯವೇದಿಕೆಯನ್ನು ರಾಮಾಯಣ ಕಾಲ ನೆನಪಿಸುವಂತೆ ಇರಬೇಕೆಂಬ ಶಾಸಕ ಜಿ.ಜನಾರ್ದನರೆಡ್ಡಿ ಅವರ ಇಚ್ಚಾಶಕ್ತಿ ಮೇರೆಗೆ ಮೈದಾನದಲ್ಲಿ ರಾಮಯಾಣ ಕಾಲದ ಚಿತ್ರಗಳನ್ನು ತಯಾರು ಮಾಡಲಾಗುತ್ತಿದೆ.
ಈ ಚಿತ್ರಗಳ ತಯಾರಿ ಕೆಲಸವನ್ನು ಬೆಂಗಳೂರು ಮೂಲದವರಿಗೆ ನೀಡಿದ್ದು, 10 ದಿನಗಳಿಂದ 6 ಜನರು ನಿರಂತರವಾಗಿ ಥರ್ಮಕೋಲ್, ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್ ಬಳಕೆ ಮಾಡಿ ರಾಮಾಯಣ ಕಾಲದ ವಿದ್ಯಾರಣ್ಯ, ಶಿವ, ಪಾರ್ವತಿ, ರಾಮ, ಲಕ್ಷ್ಮಣ, ಆಂಜನೇಯ, ಜಾಂಬವಂತ, ಸುಗ್ರೀವಾ, ಕಪಿ ಸೈನ್ಯ ಸಿದ್ಧಪಡಿಸುತ್ತಿದ್ದಾರೆ. ಈಗಾಗಲೇ ಶೇ.80ರಷ್ಟು ಚಿತ್ರಗಳ ತಯಾರಿ ಮುಗಿದಿದ್ದು, ಅವುಗಳಿಗೆ ಬಣ್ಣ ಲೇಪಿಸಲಾಗುತ್ತಿದೆ. ಇದೇ ಮೊದಲ ಬಾರಿಗೆ ಆನೆಗೊಂದಿ ಉತ್ಸವದಲ್ಲಿ ರಾಮಾಯಣ ಕಾಲದ ವ್ಯಕ್ತಿಗಳ ಚಿತ್ರಗಳನ್ನು ಮುಖ್ಯವೇದಿಕೆಗೆ ಅಳವಡಿಸಲಾಗುತ್ತಿದೆ.
ನೀಡದ ಮಾಹಿತಿ: ಆನೆಗೊಂದಿ ಗ್ರಾಮದಲ್ಲಿ ನಡೆಯುತ್ತಿರುವ ಉತ್ಸವದ ಯಾವುದೇ ಮಾಹಿತಿ ಹಾಗೂ ರೂಪುರೇಷದ ಮಾಹಿತಿಯನ್ನು ಆನೆಗೊಂದಿ ಗ್ರಾ.ಪಂಗೆ ಮತ್ತು ಸದಸ್ಯರಿಗೆ ಅಧಿಕಾರಿಗಳು ಮಾಹಿತಿ ನೀಡುತ್ತಿಲ್ಲ ಎಂದು ಆನೆಗೊಂದಿ ಗ್ರಾ.ಪಂ ಅಧ್ಯಕ್ಷೆ ಮಹಾದೇವಿ ತಿಮ್ಮಪ್ಪ ಬಾಳೆಕಾಯಿ ಆಕ್ರೋಶ ವ್ಯಕ್ತಪಡಿಸಿದರು. ಉತ್ಸವ ಆಚರಣೆ ಬಗ್ಗೆ ಆನೆಗೊಂದಿ ಗ್ರಾ.ಪಂಗೆ ಮಾಹಿತಿ ನೀಡಿ, ಸಲಹೆ ಪಡೆದು ಅದರಂತೆ ಮಾಡಬೇಕಿತ್ತು. ಆದರೆ, ಈವರೆಗೆ ಯಾವ ಮಾಹಿತಿ ನೀಡಿಲ್ಲ. ಅಧಿಕಾರಿಗಳನ್ನ ಕೇಳಿದರೆ ನಮಗೆ ಗೊತ್ತಿಲ್ಲ ಎನ್ನುತ್ತಾರೆ. ಉತ್ಸವದ ಕಾರ್ಯಕ್ರಮದ ಪಟ್ಟಿ ಇಲ್ಲ. ಆಹ್ವಾನ ಪತ್ರಿಕೆಯಿಲ್ಲ, ಕಾರ್ಯಕ್ರಮಗಳು ಏನು ನಡೆಯುತ್ತವೆ ಎಂಬುದೇ ಗೊತ್ತೆ ಇಲ್ಲ ಎಂದರು.

## ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ: ಶಾಸಕ ಪಾಟೀಲ ಗುತ್ತಿಗೆದಾರರಿಗೆ ತಾಕೀತು

**ಬೀಳಗಿ :** ಪುನರ್ವಸತಿ ಕೇಂದ್ರದ ಎಲ್ಲ ಕಾಮಗಾರಿಗಳು ಯೋಜನಾ ವರದಿ ಪ್ರಕಾರವೇ ನಡೆಯಬೇಕು. ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ. ಯೋಜನಾ ವರದಿ ಪ್ರಕಾರ ಕಾಮಗಾರಿಗಳು ನಡೆಯದಿದ್ದರೆ ಪೆಮೆಂಟ್ ಮಾಡುವದಿಲ್ಲವೆಂದು ಹಟ್ಟಿ ಚಿನ್ನದಗಣಿನಿಗಮದಅಧ್ಯಕ್ಷರು,ಶಾಸಕರಾದ ಜೆ. ಟಿ. ಪಾಟೀಲ ಗುತ್ತಿಗೆದಾರರಿಗೆ ತಾಕೀತು ಮಾಡಿದರು.
ತಾಲೂಕಿನ ಕೊಪ್ಪ (ಎಸ್.ಕೆ.) ಗ್ರಾಮದ ಪುನರ್ವಸತಿ ಕೇಂದ್ರದಲ್ಲಿ ಜಲ ಸಂಪನ್ಮೂಲ ಇಲಾಖೆ, ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ವಸತಿ ಉಪವಿಭಾಗ ಬೀಳಗಿಯಿಂದ ಮಂಜೂರಾದ ಯುಕೆಪಿ ಹಂತ 2, 3, 5ರ ಅನುದಾನದಅಡಿಯಲ್ಲಿಆಂತರಿಕರಸ್ತೆಗಳಿಗೆ ಬದಿ ಚರಂಡಿ, ಅಡ್ಡ ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.
ಬೇಸಿಗೆ ಕಾಲವಾಗಿದ್ದರಿಂದ ಬಿಸಿಲಿನ ಪ್ರಖರತೆ ಹೆಚ್ಚಾಗಿದೆ. ಒಂದು ಪಾಳೀಯ ನೀರು ಹೊಡೆಯುವದನ್ನು ತಪ್ಪಿಸಿದರೂ ಗುಣಮಟ್ಟದ ಕಾಮಗಾರಿ ಆಗುವದಿಲ್ಲ.



ಇದರ ಪರಿಣಾಮ ಕಾಮಗಾರಿಗಳು ತಾಳಿಕೆ ಬಾಳಿಕೆ ಬರುವದಿಲ್ಲ. ಯಾವುದೇ ಕಾರಣಕ್ಕೂ ಕಳಪೆ ಕಾಮಗಾರಿಗಳಿಗೆ ಅಧಿಕಾರಿಗಳು ಆಸ್ಪದ ಕೊಡಬಾರದು ಎಂದು ಕಿವಿ ಮಾತು ಹೇಳಿದರು.
ಪುನರ್ವಸತಿ ಕೇಂದ್ರದ ಕಾಮಗಾರಿಗಳು ನಡೆಯುವಸ್ಥಳಕ್ಕೆಗ್ರಾಮಸ್ಥರುಆವಾಗಾವಾಗ ಬಂದು ನೋಡಬೇಕು. ಅಲ್ಲದೇ ಮುಂದೆ ನಿಂತುಕೊಂಡು ಉತ್ತಮ ಗುಣಮಟ್ಟದ ಕಾಮಗಾರಿ ಮಾಡಿಸಿಕೊಂಡಾಗ ಮಾತ್ರ ತಉತ್ತಮ ಗುಣಮಟ್ಟದ ಕಾಮಗಾರಿಗಳಾಗಲು ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.
ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ವಸತಿ ಉಪವಿಭಾಗ ಬೀಳಗಿಯ ಎಇಇ ಕಲ್ಲೋಳೇಶ ಹಾದಿಮನಿ ಪ್ರಾಸ್ತಾವಿಕವಾಗಿ ಮಾತನಾಡಿ, ಗ್ರಾಮದ ಪುನರ್ವಸತಿಗಾಗಿ 184 ಎಕರೆ ಪ್ರದೇಶವನ್ನು ಗುರ್ತಿಸಲಾಗಿದೆ. ಸರಕಾರ ಬಂದ ಬಳಿಕ ಪುನರ್ವಸತಿ ಕೇಂದ್ರಗಳ ಕಾಮಗಾರಿಗಳಿಗೆ ಆದ್ಯತೆ ಮೇರೆಗೆ ಒತ್ತು ಕೊಟ್ಟು ಅನುದಾನ ಬಿಡುಗಡೆ ಮಾಡಿದ್ದರಿಂದ ಪ್ರಸ್ತುತ ಆಂತರಿಕ ರಸ್ತೆ, ಚರಂಡಿಗಳು, ರಸ್ತೆಗೆ ಮೊಹರಂ ಹಾಕುವ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡಿದ್ದಾರೆಂದು ಹೇಳಿದರು.
ಈ ಗಾಮಗಾರಿಗಳು ಮುಗಿದ ಬಳಿಕ ನೀರು ಸರಬರಾಜು,ರಸ್ತೆಡಾಂಬರೀಕರಣ,ವಿದ್ಯುತ್ ಪೂರೈಕೆ ಕಾಮಗಾರಿಗಳು ನಡೆಯಲಿವೆ. ಗ್ರಾಮದ ಜನರು ಕಾಮಗಾರಿಗಳ ಮೇಲೆ ನಿಗಾವಹಿಸುವುದರಿಂದ ಗುತ್ತಿಗೆದಾರರ ತಪ್ಪು ಗಮನಕ್ಕೆ ಬರಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಜಿಪಂ ಮಾಜಿ ಅಧ್ಯಕ್ಷ ಎಂ. ಎಲ್. ಕೆಂಪಲಿಂಗಣ್ಣವರ, ಮಾಜಿ ಪ್ರದಾನ ಎಲ್.ಜಿ. ಮಲಘಾಣ, ಪಾಂಡು ಪೋಲೀಸ್, ರುದ್ರಗೌಡ ಗೌಡರ, ಎಸ್. ಡಿ. ಗೌಡರ, ಎಸ್. ವಿ. ಜೀರಗಾಳ, ಎಇ ಎಸ್. ಬಿ. ಶೇಗುಣಶಿ, ಕೃಷ್ಣಾ ಮಲಘಾಣ, ಹನಮಂತ ಬಿರೋಜಿ, ಮಲ್ಲಣ್ಣಪರಡ್ಡಿ,ಹನಮಂತಆಸೋದಿ,ಬಿ.ಜಿ. ಮಲಘಾಣ, ಎಂ.ಎಚ್. ಕೆಂಪಲಿಂಗಣ್ಣವರ, ಎಚ್. ಎಸ್. ಪಾಟೀಲ, ಎಂ. ವಿ. ಹೋಳಿ, ಪಿ. ಬಿ. ಮೇಟಿ, ರಜಾಕ್ ನೂರಪ್ಪನವರ, ಬಿ. ಟಿ. ಪಾಟೀಲ, ನಾರಾಯಣ ಕಂಬಾರ ಮತ್ತಿತರಿದ್ದರು. ಅಮರ ಪಾಟೀಲ ನಿರೂಪಿಸಿದರು. ಈರಣ್ಣ ಒಣರೊಟ್ಟಿ ಸ್ವಾಗತಿಸಿದರು. ಎಚ್. ಆರ್. ಚಿಂಚಲಿ ವಂದಿಸಿದರು.

## ಅಷ್ಟೈಶ್ವರ್ಯಕ್ಕೆ ಶಿವಾಷ್ಟೋತ್ತರ ಅಭಿಯಾನ



**ವಿಜಯಪುರ :** ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನ (ರಿ) ಕೇಂದ್ರ ಕಛೇರಿ ಹರಿಹರ, ಉಪಶಾಖೆ ವಿಜಯಪುರ ವತಿಯಿಂದ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಪ್ರತಿಷ್ಠಾನದ ವತಿಯಿಂದ ವಿಜಯಪುರ ನಗರದ ಮದ್ದಿನ ಕಣಿ
ಹತ್ತಿರದ ಅಡವಿ ಶಂಕರ ಲಿಂಗ ದೇವಸ್ಥಾನದಲ್ಲಿ ಉಚಿತವಾಗಿ ಶಿವಾಷ್ಟೋತ್ತರ ಶತನಾಮಾವಳಿ ಸುಮಾರು 1000 ಪ್ರತಿಗಳನ್ನು ವಿತರಿಸಿ 'ಅಷ್ಟೈಶ್ವರ್ಯಕ್ಕೆ ಶಿವಾಷ್ಟೋತ್ತರ ಅಭಿಯಾನ' ಅದ್ಧುರಿಯಾಗಿ ಜರುಗಿತು.
ಈ ಸಂದರ್ಭದಲ್ಲಿ ಶಂಕರ ಜತ್ತಿ, ಭೀಮಾಶಂಕರ ಕುಮಟಗಿ, ಕವಿತಾ ಕೋಟ್ಯಾಳ, ಶ್ರೇಯಾ ರಗಟೆ, ಆನಂದ ಕುಮಟಗಿ ಸೇರಿದಂತೆ ಪ್ರತಿಷ್ಠಾನದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಹಸ್ರಾರು ಭಕ್ತರು ಅಭಿಯಾನದಲ್ಲಿ ಉತ್ಸುಕತೆಯಿಂದ ಭಾಗವಹಿಸಿದ್ದರು.

## ವಿ.ಟಿ.ಯು 23ನೇ ಘಟಿಕೋತ್ಸವ ಭಾಗ–2

# ವಿಜ್ಞಾನ, ತಂತ್ರಜ್ಞಾನ ಬೆಳವಣಿಗೆ ಮೂಲಕ ಭಾರತ ಪ್ರಗತಿಪರ ರಾಷ್ಟ್ರವಾಗಿದೆ: ರಾಜ್ಯಪಾಲ ಗೆಹ್ಲೋಟ್

**ಬೆಳಗಾವಿ :** ಭವಿಷ್ಯದಲ್ಲಿ ಭಾರತ ವಿಶ್ವದ ಎಲ್ಲ ದೇಶಗಳಲ್ಲಿ ಮುಂಚೂಣಿಯ ರಾಷ್ಟವಾಗಲಿದೆ. ಡಿಜಿಟಲ್ ತಂತ್ರಜ್ಞಾನ ಆವಿಷ್ಕಾರಗಳ ಮೂಲಕ ಭಾರತ ಸಾಕ್ಷಷ್ಟು ಪ್ರಗತಿ ಹೊಂದುತ್ತಿದೆ. ಚಂದ್ರಯಾನ, ಮಂಗಳಯಾನ ಸೇರಿದಂತೆ ಭಾರತ ವಿಭಿನ್ನ ಸಾಧನೆ ತೋರುತ್ತಿದೆ. ತಂತ್ರಜ್ಞಾನ ಮತ್ತು ವಿಜ್ಞಾನದ ಬೆಳವಣಿಯಲ್ಲಿ ಭಾರತ ವಿಶ್ವದಲ್ಲಿ ದೇಶ ತನ್ನದೇಯಾದ ಛಾಪು ಮೂಡಿಸಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ತಿಳಿಸಿದರು.
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜ್ಞಾನಸಂಗಮಆವರಣದಡಾ.ಎ.ಪಿ.ಜೆಅಬ್ದುಲ್ ಕಲಾಂ ಸಭಾಂಗಣದಲ್ಲಿ ಗುರುವಾರ (ಮಾ.07) ನಡೆದ ವಿಟಿಯು 23ನೇ ಘಟಿಕೋತ್ಸವ ಭಾಗ–2ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
ವಿಶ್ವೇಶ್ವರ ತಾಂತ್ರಿಕ ವಿಶ್ವವಿದ್ಯಾಲಯದ 600 ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಪಿಹೆಚ್ ಡಿ ಪದವಿ ಪದಾನ ಮಾಡಲಾಗಿದೆ. ದೇಶ ನಮಗೆ ಎಲ್ಲವನ್ನೂ ಕೊಟ್ಟಿದೆ ಅದರಂತೆ ದೇಶಕ್ಕೆ ನಮ್ಮ ಕೊಡುಗೆಯ ಅಗತ್ಯವಿದೆ. ದೇಶವನ್ನು ಆತ್ಮನಿರ್ಭರ ಹಾಗೂ ಸರ್ವಶ್ರೇಷ್ಠ ಮಾಡಲು ಇಂದಿನ ವಿದ್ಯಾರ್ಥಿಗಳ ಸಹಕಾರ ಅವಶ್ಯಕತೆ ಇದೆ. ಔದ್ಯೋಗಿಕ ಕ್ಷೇತ್ರ ನಮ್ಮ ಕಲ್ಪನೆಗಿಂತಲೂ ಅತಿ ವೇಗವಾಗಿ ಬೆಳೆಯುತ್ತಿದೆ. ಇಂದಿನ





ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ. ಸುಸ್ಥಿರ ದೇಶಕ್ಕಾಗಿ ನಿಮ್ಮ ಕೊಡುಗೆ ಬೇಕಿದೆ ಎಂದು ತಿಳಿಸಿದರು.
ಪದವಿ ಪಡೆದ ನಂತರ ನೀವು ದೇಶಕ್ಕೆ ಕೊಡುಗೆ ನೀಡಲು ಮುಂದಾಗಬೇಕು. ಪ್ರಸ್ತುತ ದಿನಮಾನಗಳಲ್ಲಿ ಭಾರತ ದೇಶ ಎಲ್ಲ ವಲಯಗಳಲ್ಲಿ ಬೆಳವಣಿಗೆ ಕಾಣುತ್ತಿದೆ. ಇದಕ್ಕೆ ಪೂರಕವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವುದರ ಮೂಲಕ ಇತರರಿಗೆ ಪ್ರೇರಣೆಯಾಗಬೇಕು.
ಭವಿಷ್ಯದ ಬಲಿಷ್ಠ ಭಾರತ ನಿರ್ಮಾಣಕ್ಕೆ ನೀವೆಲ್ಲರೂ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಸಾಧನೆ ಹೆಚ್ಚು ಒತ್ತು ನೀಡಬೇಕು. ನೀವು ಪಡೆದಂತಹ ಪದವಿ, ಚಿನ್ನದ ಪದಕಕ್ಕೆ ನಿಮ್ಮ ಸಾಧನೆಯ ಮೂಲಕ ಮುಂದಿನ 10 ವರ್ಷಗಳಲ್ಲಿ ಅದರ ಮೌಲ್ಯ ಹೆಚ್ಚಾಗಲಿದೆ. ಅದರಂತೆ ದೇಶದಲ್ಲಿ ಮಹಿಳೆಯರು ಸಹ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ ಅವರ ಸಾಧನೆಗಳಿಗೆ ನಾವೆಲ್ಲರೂ ಬೆಂಬಲ ನೀಡಬೇಕು ಎಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ತಿಳಿಸಿದರು.
ಪದವಿ ಬಳಿಕ ಪ್ರಮಾಣ ಪತ್ರ ಪಡೆಯುವುದು ಮಾತ್ರವಲ್ಲದೇ ಕಲಿತ ಜ್ಞಾನದಿಂದ ಬಡ ಮತ್ತು ಮಧ್ಯಮ ಜನರ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ದೊಡ್ಡ ದೊಡ್ಡ ಕಂಪನಿಗಳಿಗೆ ಸೇರುವುದಕ್ಕಿಂತ ಸ್ವಯಂ ಉದ್ಯೋಗ ಸೃಷ್ಟಿಯ ಮೂಲಕ ಉತ್ತಮ ವೃತ್ತಿಜೀವನ ಕಟ್ಟಿಕೊಳ್ಳಬೇಕು ಎಂದು ರಾಮನ್ ಮ್ಯಾಗ್ಸಸ್ಸೇ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಪುರಸ್ಕೃತರು ಮತ್ತು ಸೆಲ್ಕೋ ಫೌಂಡೇಶನ್ ಹಾಗೂ ಸೆಲ್ಕೋ ಇಂಡಿಯಾ ಸಹ ಸಂಸ್ಥಾಪಕ ಡಾ. ಹರೀಶ ಹಂಡಾ ಅವರು ಹೇಳಿದರು.
ಕಳೆದ 25 ವರ್ಷಗಳಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲದಲ್ಲಿ ಪದವಿ ಪಡೆದ ಅನೇಕ ವಿದ್ಯಾರ್ಥಿಗಳು ಈಗ ಉನ್ನತ ಉದ್ಯೋಗದಲ್ಲಿದ್ದಾರೆ. ಕಲಿಕೆ ಪದವಿಗಳಿಕೆಗೆ ಸೀಮಿತವಾಗದೇ, ಪದವಿ ಪಡೆದ ಬಳಿಕವೂ ಪ್ರತಿ ದಿನ ಹೊಸತನ್ನು ಕಲಿಯುತ್ತಾ ಇರಬೇಕು. ನಿರಂತರ ಕಲಿಕೆಯಿಂದ ಮಾತ್ರ ಹೊಸ ಆವಿಷ್ಕಾರಗಳು ಸಾಧ್ಯ ಎಂದು ಉನ್ನತ ಶಿಕ್ಷಣ ಇಲಾಖೆ ಸಚಿವ ಡಾ.ಎಂ ಸಿ ಸುಧಾಕರ ಅವರು ತಿಳಿಸಿದರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್ ಕುಲಸಚಿವರಾದ ಬಿ.ಇ ರಂಗಸ್ವಾಮಿ,ಮೌಲ್ಯಮಾಪನಕುಲಸಚಿವರಾದ ಟಿ.ಎನ್‌ಶ್ರೀನಿವಾಸಉಪಸ್ಥಿತರಿದ್ದರು.ಬೋಧಕ–ಬೋಧಕೇತರಸಿಬ್ಬಂದಿ,ವಿದ್ಯಾರ್ಥಿಗಳುಹಾಗೂ ಪಾಲಕರು ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದರು.
ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರಧಾನ: ಇದಕ್ಕೂ ಮುಂಚೆ ಬೆಂಗಳೂರಿನ ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಂಬಿಎ ವಿಭಾಗದ ವಿದ್ಯಾರ್ಥಿನಿ ಜಿ.ತನು 4 ಚಿನ್ನದ ಪದಕ, ಹುಬ್ಬಳ್ಳಿಯ ಕೆಎಲ್‌ಇ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಅಕ್ಷತಾ ನಾಯ್ಕ ಮತ್ತು ದಾವಣಗೆರೆಯ ಯುಬಿಡಿಟಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಎಂ.ಪೂಜಾ ತಲಾ 3 ಚಿನ್ನದ ಪದಕ, ಬೆಳಗಾವಿಯ ಎಸ್.ಜಿ.ಬಾಳೇಕುಂದ್ರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಕ್ರಾಂತಿಮೋರೆ,ಚಿಕ್ಕಮಗಳೂರಿನ ಆದಿಚುಂಚನ ಗಿರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಚ್.ಪಿ.ಚೇತನ ಮತ್ತು ದಾವಣಗೆರೆಯ ಯುಬಿಡಿಟಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಎ.ಎಸ್.ನಿತ್ಯಾ ತಲಾ 2 ಚಿನ್ನದ ಪದಕ ವಿತರಿಸಲಾಯಿತು.
ಘಟಿಕೋತ್ಸವದಲ್ಲಿಒಟ್ಟು4,514ಎಂಬಿಎ,4,024 ಎಂಸಿಎ, 920 ಎಂ.ಟೆಕ್, 44 ಎಂ.ಆರ್ಚ್, 27 ಎಂ.ಪ್ಲಾನ್ ಪದವಿ ನೀಡಲಾಗುವುದು. ಪಿಎಚ್.ಡಿ 667, ಎಂ.ಎಸ್ಸಿ ಎಂಜಿನಿಯರಿಂಗ್ ಬೈ ರಿಸರ್ಚ್ 2, ಇಂಟಿಗ್ರೇಟೆಡ್ ಡ್ಯುಯೆಲ್ ಡಿಗ್ರಿ ಟು ರಿಸರ್ಚ್ 2 ಸಂಶೋಧನಾ ಪದವಿಗಳನ್ನು ಪ್ರದಾನ ಮಾಡಲಾಯಿತು.

# ದೇವದಾಸಿಯಂತ ಪದ್ಧತಿ ಬೇರು ಸಮೇತ ಕಿತ್ತು ಹಾಕಲು ಸಂಘಟಿತರಾಗಬೇಕು: ಅಮ್ಮ ಸಂಸ್ಥೆಯ ಸಂಸ್ಥಾಪಕಿ ಶೋಭಾ ಗಸ್ತಿ



**ಬೆಳಗಾವಿ :** ಸಮಾಜದಲ್ಲಿ ಮೂಡನಂಬಿಕೆ ಹಾ ಸ್ ಂ ಹ್ ೂ ಕ್ಕಾ ಗಿ ರ್ ಂ ವ್ ದ್ ರಿ ಂ ದ್ ದೇವದಾಸಿಯಂತ ಪದ್ಧತಿ ಇನ್ನೂ ಜೀವಂತವಿದೆ. ಅದನ್ನು ಬೇರು ಸಮೇತ ಕಿತ್ತು ಹಾಕಲು ಮೊದಲು ಸಂಘಟಿತರಾಗಬೇಕು. ಅದಕ್ಕೆ ಮುಖ್ಯವಾಗಿರಬೇಕಾಗಿದ್ದು ಶಿಕ್ಷಣ. ಗ್ರಾಮಿಣ ಪ್ರದೇಶದಲ್ಲಿ ಇನ್ನೂ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ ಸುಶಿಕ್ಷಿತರನ್ನಾಗಿಸುವ ಕಾರ್ಯ ಮಾಡಬೇಕಾಗಿದೆ ಎಂದು ಮೂಡಲಗಿಯ ಅಮ್ಮ ಸಂಸ್ಥೆಯ ಸಂಸ್ಥಾಪಕಿ ಶೋಭಾ ಗಸ್ತಿ ಅವರಿಂದಿಲ್ಲಿ ಹೇಳಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೆಎಲ್‌ಇ ಸಂಸ್ಥೆಯ ಸ್ವ ಶಕ್ತಿ ಮಹಿಳಾ ಸಬಲೀಕರಣ ಘಟಕವು ಏರ್ಪಡಿಸಿದ್ದ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸಾಂಪ್ರದಾಯಿಕ ನಂಬಿಕೆಗಳನ್ನು ವಿರೋಧಿಸುವ ಗುಣಗಳನ್ನು ಬೆಳೆಸಿಕೊಂಡು ತನ್ನದೇ ಆದ ಮಾರ್ಗವನ್ನು ಕಂಡುಕೊಳ್ಳಬೇಕು. ಸಮಾಜದ ಮೇಲೆ ಪರಿಣಾಮ ಬೀರುವ ಮೂಡನಂಬಿಕೆಗಳಿಗೆ ಜೋತು ಬೀಳದೇ ಸುಶಿಕ್ಷಿತರಾಗಬೇಕು ಎಂದು ಕರೆ ನೀಡಿದ ಅವರು, 6ನೇ ತರಗತಿಯಲ್ಲಿ ಓದುತ್ತಿರುವಾಗಲೇ ದೇವರ ಹೆಸರಿನಲ್ಲಿ ಮುತ್ತು ಕಟ್ಟಿ ಅವರನ್ನು ಅಂಧಕಾರಕ್ಕೆ ತಳ್ಳಿರುವ ದುಃಖವನ್ನು ತೋಡಿಕೊಂಡರು. 1997 ರಲ್ಲಿ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ ಪ್ರಾರಂಭಿಸಿ, ಕರ್ನಾಟಕದಾದ್ಯಂತ 360 ಹಳ್ಳಿಗಳಿಂದ 3,600 ಕ್ಕೂ ಅಧಿಕ ಮಕ್ಕಳನ್ನು ರಕ್ಷಿಸಲಾಗಿದೆ. 200ಕ್ಕೂ ಹೆಚ್ಚು ಹಣ್ಣು ಮಕ್ಕಳನ್ನು ಒಂದೇ ವರ್ಷದಲ್ಲಿ ಮರಳಿ ಶಾಲೆಗೆ ಕಳುಹಿಸುವ ಕಾರ್ಯ ಮಾಡಲಾಗಿದೆ ಎಂದು ತಿಳಿಸಿದರು.

ಪಂಖ ಇಂಡಿಯಾ ಫಂಡೇಶನ್ ಹಾಗೂ ಪಂಖ ಹ್ಯಾಂಡಿಕ್ರಾಫ್ಟನ ಸಿಇಓ ಗೌರಿ ಮಾಂಜರೇಕರ ಅವರು ಮಾತನಾಡಿ, ಸಮಾಜದಲ್ಲಿ ಲಿಂಗ ಸಮಾನತೆ ಬರಬೇಕು. ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದಾಗ ಮಹಿಳೆ ಸಬಲಳಾಗುತ್ತಾಳೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡದೇ ಅರ್ಧಕ್ಕೆ ಮೊಟಕುಗೊಳಿಸಲಾಗುತ್ತಿದೆ. ಆದ್ದರಿಂದ ಗ್ರಾಮೀಣ ಸ್ತ್ರೀಯರ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಶಿಕ್ಷಣದ ಜೊತೆಗೆ ಅವರಿಗೆ ವೃತ್ತಿಪರ ತರಬೇತಿ ನೀಡಿ ಆರ್ಥಿಕ ಮತ್ತು ಸಾಮಾಜಿಕವಾಗಿ ಪ್ರಭಾವಶಾಲಿಗಳನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಲಿಂಗಬೇಧ ತಾರತಮ್ಯ ಅಧಿಕಗೊಳ್ಳುತ್ತಿದೆ. ಅದು ತಪ್ಪಬೇಕಾದರೆ ಸುಶಿಕ್ಷಿತ ಸಮಾಜ ನಿರ್ಮಾಣ ಮಾಡಬೇಕಾಗಿದೆ. ಹೆಣ್ಣು ಮನೆಯ ಬೆಳಕು ಎಂಬುದನ್ನು ಅರಿತುಕೊಳ್ಳಬೇಕು. ಸ್ತ್ರೀ ಇಲ್ಲದ ಸಮಾಜವನ್ನು ಉಹಿಸಿಕೊಳ್ಳುವದು ಅಸಾಧ್ಯ ಎಂದ ಅವರು, ಪಂಖ ಮೂಲಕ ಕರಕುಶಲ ವೃತ್ತಿಪರ ತರಬೇತಿಯನ್ನು ನೀಡಿ ವಿಭಿನ್ನವಾಗಿ ಯೋಚಿಸುವ ಕಾರ್ಯವಿಧಾನಗಳನ್ನು ತಿಳಿಸಿಕೊಡಲಾಗುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಕೆಎಲ್‌ಇ ಸ್ತ್ರೀಶಕ್ತಿ ಸಂಘದ ಉಪಾಧ್ಯಕ್ಷೆ ಡಾ. ಅಲ್ಕಾ ಕಾಳೆ ಅವರು ವಹಿಸಿದ್ದರು. ಸಮಾರಂಭದಲ್ಲಿ ಡಾ. ಆರತಿ ಮಹಿಶ್ಯಾಳೆ, ಡಾ. ಹರಪ್ರೀತ ಕೌರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಬೀಳ್ಕೋಡುಗೆ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಆಚರಣೆ




**ಬೆಳಗಾವಿ :** ನಗರದ ಪಿ.ಎಚ್.ಕ್ಯೂ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂಬರ್ 21, 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೋಡುಗೆ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಇತ್ತೀಚೆಗೆ ಈ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಎಸ್. ಡಿ. ಎಮ್. ಸಿ ಅವರ ಸಹಯೋಗದಲ್ಲಿ ವಿನೂತನವಾಗಿ ವೈಶಿಷ್ಟ ಪೂರ್ಣವಾಗಿ ಹಮ್ಮಿಕೊಳ್ಳಲಾಗಿತ್ತು.ಜಿಲ್ಲೆಯ ಅಭಿವೃದ್ಧಿ ಮತ್ತು ಆಡಳಿತ ಉಪ ನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಕರ ಸಂಘಟನೆಗಳು, ಸಮೂಹ ಸಂಪನ್ಮೂಲ ಸಂಯೋಜ–ಕರು, ಸಂಪನ್ಮೂಲ ವ್ಯಕ್ತಿಗಳು, ಈ ಶಾಲೆಯ ಕೊಡುಗೈದಾನಿಗಳು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಚಾಲನೆ ನೀಡಿದರು.

ಕಾರ್ಯಕ್ರಮದ ವಿಶೇಷತೆಗಳು ಈ ಸರ್ಕಾರಿ ಶಾಲೆಯನ್ನು ಶೈಕ್ಷಣಿಕವಾಗಿ ಮತ್ತು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಕುರಿತಾಗಿ ಶ್ರೀಮತಿ ಆಶಾ ಮೌನೇಶ್ ಪೋದಾರ ಶಿಕ್ಷಕಿ ಸರ್ಕಾರಿ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ಅಂಬೇವಾಡಿ ಅವರು ತಮ್ಮ ಶಾಲೆಯಂತೆ ಈ ಶಾಲೆಯನ್ನು ದತ್ತು ಪಡೆದು ದೃಢ ನಿರ್ಧಾರದಿಂದ ಅಭಿವೃದ್ಧಿ ಪಡಿಸುತ್ತೇನೆಂದು ವಾಗ್ದಾನ ಮಾಡಿದರು. ಇದು ಇಡೀ ಸಮಾಜಕ್ಕೆ ಮಾದರಿ ಮತ್ತು ಸ್ಫೂರ್ತಿ ಶ್ರೀಮತಿ ಗಿರಿಜಾ ಮಣ್ಣಿಕೇರಿ ಸಹ ಶಿಕ್ಷಕರು ತಮ್ಮ ಶಾಲೆಗೆ ಒಂದು ಲಕ್ಷ ರುಪಾಯಿ ಗೇಣಿಗೆ ಕೊಡಲು ಪ್ರೇರೇಪಿತರಾಗಿದ್ದಾರೆ.

ಮುಂದಿನ ವರ್ಷ 2024– 25ನೇ ಸಾಲಿಗಾಗಿ ಈ ಶಾಲೆಯಲ್ಲಿ ಎಲ್. ಕೆ. ಜಿ. ಯು. ಕೆ.ಜಿ ತರಗತಿಗಳನ್ನು ಪ್ರಾರಂಭಿಸಲು ಉಪ ನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಅನುಮತಿ ಪಡೆದು ಇತರ ಮೂಲಗಳಿಂದ ಸಂಪನ್ಮೂಲಗಳನ್ನು ಕ್ರೂಢಿಕರಿಸಿ ಪೂರ್ವ ಪ್ರಾಥಮಿಕ ವರ್ಗ ಪ್ರಾರಂಭಿಸಲು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಇದಕ್ಕಾಗಿ ಮುಂಬರುವ ಮುಗ್ಧ ಕಂದಮ್ಮಗಳಿಗೆ ಕಲಿಕಾ ಪರಿಕರಗಳನ್ನು ಈ ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

ಬಹಳಷ್ಟು ವಿದ್ಯಾರ್ಥಿಗಳ ತಾಯಂದಿರು ಹಾಜರಾಗಿರುವುದರಿಂದ ಮಕ್ಕಳ ನಡೆ ನುಡಿ, ಹಾವಭಾವ, ಸಂಸ್ಕೃತಿ ಸಭ್ಯತೆ, ಕಲಿವು ನಲಿವು, ಓದು ಬರಹ, ಆಚಾರ ವಿಚಾರ ಲೆಕ್ಕಾಚಾರ, ಸ್ವಾವಲಂಬನೆಯ ಅರಿವು ಮತ್ತು ಸ್ವಂತ ಕೆಲಸ, ಶಿಸ್ತು ಸಂಯಮ ಇವುಗಳ ಕುರಿತಾಗಿ ವಿಚಾರಗಳು ಮೂಡಿ ಬಂದವು.

ಬಡ ಮಕ್ಕಳ ಶೈಕ್ಷಣಿಕ ಉದ್ದಾರಕ್ಕಾಗಿ ಇಲಾಖೆ ಒದಗಿಸಿರುವ ಹಲವಾರು ಉಚಿತ ಸೌಲಭ್ಯಗಳಾದ ಬಿಸಿ ಊಟ ದೊಂದಿಗೆ ಶೇಂಗಾ ಚಕ್ಕೆ ಬಾಳೆಹಣ್ಣು ತತ್ತಿ ,, ಕ್ಷೀರ ಭಾಗ್ಯ, ಸ್ಕಾಲರ್ ಶಿಪ್, ಪಠ್ಯಪುಸ್ತಕ, ಸಮವಸ್ತ್ರ, ಶೂ ಸಾಕ್ಸ್, ನುರಿತ ಅನುಭವಿ ಶಿಕ್ಷಕರ ಬೋಧನೆ ಗ್ರಂಥಾಲಯ ವಾಚನಾಲಯಗಳ ಬಳಕೆ ಕುರಿತು ಪಾಲಕರಲ್ಲಿ ಭರವಸೆ ಮತ್ತು ನಂಬಿಕೆ ಮೂಡಿಸಲಾಯಿತು .

ಆಟೋಟಗಳಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಸಮೇತ ಬಹುಮಾನ ವಿತರಣೆ, ಸಾಧಕರಿಗೆ ಮತ್ತು ದಾನಿಗಳಿಗೆ ಸನ್ಮಾನ, ಹೊಸ ಅಭಿವೃದ್ಧಿಕರ ವಿಷಯಗಳನ್ನು ಕುರಿತು ಪಾಲಕರಿಂದ ಮಾಹಿತಿ ಸ್ವೀಕರಿಸಿ , ಮಕ್ಕಳಿಂದ ಸಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲಾಯಿತು.

ಪ್ರತಿ ವರ್ಷ ಈ ಶಾಲೆಗೆ ಶೇಕಡ 10 ರಷ್ಟು ಮಕ್ಕಳ ಸಂಖ್ಯೆಯನ್ನು ದ್ವಿಗುಣ ಗೊಳಿಸುವುದು ಮತ್ತು ಶೈಕ್ಷಣಿಕ ಗುಣಮಟ್ಟದ ಭರವಸೆಯನ್ನು ತುಂಬುವುದು ಈ ಶಾಲೆಯ ಮುಖ್ಯ ಧ್ಯೇಯವಾಗಿದೆ. ಎಲ್ಲ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿ ನಿಂತ ಶ್ರೀ ಶ್ರೀ ಡಿ ಎಚ್ ಜಮಾದಾರ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಮನಸಿಟ್ಟು ಕಾರ್ಯ ಮಾಡಿದ್ದನ್ನು ಮೆಚ್ಚಲಾಯಿತು, ಪ್ರತಿಯೊಂದು ಶಿಕ್ಷಕರಲ್ಲಿರುವ ಒಗ್ಗಟ್ಟು, ಮಕ್ಕಳ ಕುರಿತು ವೈಯಕ್ತಿಕ ಕಾಳಜಿ ಮೆಚ್ಚುವಂತದ್ದು. ವಿಶೇಷವಾಗಿ ಶೈಕ್ಷಣಿಕ ಗುಣಮಟ್ಟಕ್ಕೆ ಒತ್ತು ನೀಡುವಲ್ಲಿ ಶ್ರೀ ಜಯಕುಮಾರ ಹೆಬಳಿ ದೈಹಿಕ ಶಿಕ್ಷಕರು ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರು ವಿಶೇಷ ಕಾಳಜಿ ವಹಿಸಿ, ಸರಕಾರಿ ಶಾಲೆಯ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ, ಮತ್ತು ಶಾಲಾ ಅಭ್ಯುದಯದ ಆಂದೋಲನಕ್ಕೆ ಈ ವರ್ಷ ಅಡಿಪಾಯ ಹಾಕಿದ್ದಾರೆ. ಮೂಲತಃ ಸರಕಾರಿ ಶಾಲೆಯಲ್ಲಿ ಕಲಿತ ಅವರು ಪ್ರತಿಯೊಂದು ಮಗುವು ತನ್ನ ಜೀವನದ ಎಲ್ಲ ಕನಸುಗಳನ್ನು ಸ್ವಚ್ಛಂದವಾಗಿ ಬದುಕು ಕಟ್ಟಿಕೊಳ್ಳಲಿ, ತಮ್ಮಂತಯೇ ಅವರು ಉತ್ತಮ ಮೌಲ್ಯಗಳನ್ನು ಹೊಂದುವಂತಾಗಲಿ, ಸಮಾಜಕ್ಕಾಗಿ ಸಹಕಾರಯುತ ಮನೋಧೋರಣೆಯನ್ನು ಹೊಂದಲಿ ಎನ್ನುವ ಪ್ರೇರಣೆ ತಾವಾಗಬೇಕೆನ್ನುವ ಕನಸನ್ನು ಈ ಶಾಲೆಯ ಮಕ್ಕಳಲ್ಲಿ ಕಂಡಿ–ದ್ದಾರೆ. ಶಿಕ್ಷಕರ ಸಂಘಟನೆಗಳ ಕರ್ತವ್ಯ ಬರೀ ಹಕ್ಕುಗಳ ಬೇಡಿಕೆಗಳಲ್ಲ ಮಕ್ಕಳ ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸುತ್ತ ಆಂದೋಲನ ಮಾಡಬೇಕಾಗಿದೆ ಎಂಬುದಕ್ಕೆ ಈ ವೇದಿಕೆ ಸಾಕ್ಷಿಯಾಗಿದೆ. ಇಲಾಖೆಯ ಸೌಲಭ್ಯಗಳನ್ನು ಬಳಸಿ ಶಿಕ್ಷಕರು ವಿನೂತನ ಶೈಕ್ಷಣಿಕ ಕಾರ್ಯ ಚಟುವಟಿಕೆ ಹಮ್ಮಿಕೊಂಡು ಮಕ್ಕಳು ನಿರ್ದಿಷ್ಟ ಗುರಿ ಮುಟ್ಟಲು ಎಲ್ಲ ಅಧಿಕಾರಿಗಳು ಹಾರೈಸಿದ್ದಾರೆ. ಹೀಗೆ ಎಲ್ಲಾ ಶಾಲೆಗಳು ಶೈಕ್ಷಣಿಕ ಭರವಸೆಯ ಬೆಳಕಾಗಲಿ ಎಂಬುದೇ ಇಲಾಖೆಯ ಆಶಯ.

**ವರದಿಗಾರ ನಂದೀಶ ಮೆಣಸಿನಕಾಯಿ**
**ಬೆಳಗಾವಿ**

# ಜಿತೋ ಫೌಂಡೇಶನ ದಿನಾಚರಣೆ: ವಿವಿಧ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಬೆಳಗಾವಿ :** ಜೈನ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಝೇಶನ ಜಿತೋ ಸಂಸ್ಥೆಯ 18 ನೇ ಫೌಂಡೇಶನ ದಿನಾಚರಣೆಯನ್ನು ಇದೇ ಮಾರ್ಚ 17 ರಂದು ಬೆಳಗಾವಿಯ ಮಿಲೆನಿಯಂ ಗಾರ್ಡನದಲ್ಲಿ ನಡೆಯಲಿದೆ.

ಈ ಫೌಂಡೇಶನ ದಿನಾಚರಣೆ ಅಂಗವಾಗಿ ಜೈನ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದ್ದು, ಈ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ನೀಡಿ ಮಹನೀಯರನ್ನು ಗೌರವಿಸಲಾಗುವುದು.

ಯಶಸ್ವಿ ಉದ್ಯಮಿ ಪ್ರಶಸ್ತಿ, ಶಿಕ್ಷಕ ಪ್ರಶಸ್ತಿ, ಸಮಾಜ ಸೇವಕ ಪ್ರಶಸ್ತಿ, ಕಲೆ ಮತ್ತು ಸಾಹಿತ್ಯ ಕ್ಷೇತ್ರದ ಪ್ರಶಸ್ತಿ, ಯುವ ಸಾಧಕ ಪ್ರಶಸ್ತಿ, ಅತ್ಯುತ್ತಮ ಕೃಷಿಕ ಅಥವಾ ರೈತ ಪ್ರಶಸ್ತಿ, ಹೀಗೆ ಒಟ್ಟು 6 ಪ್ರಶಸ್ತಿಗಳನ್ನು ವಿತರಿಸಲಾಗುವುದು.

ಈ ಪ್ರಶಸ್ತಿಗಳಿಗಾಗಿ ಸಂಘ ಸಂಸ್ಥೆಗಳು ಅರ್ಹ ಮಹನೀಯರ ಶೀಫಾರಸ್ಸು ಮಾಡಬಹುದು. ಅದಲ್ಲದೇ ಪ್ರಶಸ್ತಿಗಾಗಿ ಸ್ವಯಂ ಅರ್ಜಿಯನ್ನು ಸಹ ಸಲ್ಲಿಸಬಹುದು. ಮಾರ್ಚ 12 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ರಾಜೇಶ ಭೋಸಗಿ ಮೊ:8762484801 ಹಾಗೂ ಉಮೇಶ ನರಸಗೌಡಾ 9035187431 ಇವರನ್ನು ಸಂಪರ್ಕಿಸಬಹುದಾಗಿದೆ ಅಥವಾ ಜಿತೋ ಕಾರ್ಯಾಲಯ ಖಾನಾಪೂರ ರಸ್ತೆ ಉದ್ಯಮಬಾಗ ಇಲ್ಲಿ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮಾನವೀಯ ಮೌಲ್ಯಗಳಿಂದ ಪರಿಪೂರ್ಣ ಶಿಕ್ಷಣ–ಧನಗೊಂಡ



**ತಾಳಿಕೋಟೆ :** ಮಕ್ಕಳಿಗೆ ಶಿಕ್ಷಕರು ಕೇವಲ ಶಿಕ್ಷಣ ನೀಡಿದರೆ ಸಾಲದು ಮಾನವೀಯ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತುವಂತಹ ಕಾರ್ಯ ಮಾಡಬೇಕು ಇದರಿಂದ ಮಕ್ಕಳಿಗೆ ಸಂಸ್ಕಾರಯುತ ಪರಿಪೂರ್ಣವಾದ ಶಿಕ್ಷಣ ಸಿಕ್ಕಂತಾಗಲಿದೆ ಎಂದು ಜಾನಪದ ಸಾಹಿತಿ ಶಿಕ್ಷಕ ಸಿದ್ದು ಧನಗೊಂಡ ಅವರು ಹೇಳಿದರು.

ತಾಲೂಕಿನ ತುಂಬಗಿ ಗ್ರಾಮದ ಶ್ರೀ ಪರಮಾನಂದ ಹಿರಿಯ ಪ್ರಾಥಮಿಕ ಶಾಲೆಯ 9ನೇ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ಉತ್ತಮ ಶಿಕ್ಷಣ ನೀಡುವ ಶಾಲೆಯು ಯಾವಾಗಲು ಜೀವಂತಿಕೆಯಿಂದ ಉಳಿದುಕೊಳ್ಳುತ್ತದೆ ನಗರ ಪ್ರದೇಶದಲ್ಲಿಯ ಶಾಲೆಗಳಲ್ಲಿ ಕೇವಲ ಆಡಂಬರದ ಪ್ರಚಾರದ ಶಿಕ್ಷಣಕ್ಕೆ ಜೋತು ಬಿದ್ದಿವೆ ಇಂತಹ ಸಂದರ್ಬದಲ್ಲಿಯೂ ಕೂಡಾ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿರುವ ಶ್ರೀ ಪರಮಾನಂದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉತ್ತಮ ಶಿಕ್ಷಣದ ಜೊತೆಗೆ ಸ್ಪರ್ದಾತ್ಮಕ ಪರಿಕ್ಷೆಗಳ ತರಬೇತಿ ನೀಡುವದರೊಂದಿಗೆ ತನ್ನ ಹಿರಿತನವನ್ನು ಕಾಯ್ದು–ಕೊಂಡಿದೆ ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಹೆಚ್ಚು ಮಕ್ಕಳ ಹೊಂದಿರುವ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಕೇವಲ 9 ವರ್ಷಗಳಲ್ಲಿ ಅಗಾದವಾದ ಸಾಧನೆಯನ್ನು ಮಾಡುತ್ತಾ ಬಂದಿರುವ ಈ ಶಾಲೆಯ ಮಕ್ಕಳು ಮುಂದಿನ ವಿದ್ಯಾಭ್ಯಾಸಕ್ಕೆ ಹೋಗುತ್ತಿರುವ ಸಂದರ್ಬದಲ್ಲಿ ಮಕ್ಕಳಿಗೆ ಶುಭಕೋರುವಂತಹ ಕಾರ್ಯ ಶಿಕ್ಷಣ ಸಂಸ್ಥೆಯಿಂದ ನಡೆದಿರುವದು ಸಂತಸ ತಂದಿದೆ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಮಕ್ಕಳಷ್ಟೇ ಜವಾಬ್ದಾರಿ ಪಾಲಕರದ್ದು ಇದ್ದು ಇದನ್ನು ಅರ್ಥೈಸಿಕೊಂಡು ಮಕ್ಕಳಿಗೆ ಶಿಕ್ಷಣದಲ್ಲಿ ಮೇರುಘಟ್ಟವನ್ನು ತಲುಪಲು ಸಹಾಯಕಾರಿಯಾಗಬೇಕೆಂದು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸಿ ಸಮಾರಂಭವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದ ತುಂಬಗಿ–ಸಾಸನೂರ ಹಿರೇಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಇಂದಿನ ಕಾಲದಲ್ಲಿ ಮಕ್ಕಳಿಗೆ ಕೇವಲ ಶಿಕ್ಷಣ ಮುಖ್ಯವೆಂದು ಪಾಲಕರು ವಾಲುತ್ತಾ ಸಾಗಿದ್ದರಿಂದ ಮಕ್ಕಳಲ್ಲಿ ಸಂಸ್ಕಾರವೆಂಬುದು ಕಾಣುತ್ತಿಲ್ಲಾ ಸಂಸ್ಕಾರವಿದ್ದರೆ ಇಡೀ ಜಗತ್ತಿನಲ್ಲಿ ಎಲ್ಲಿಯಾದರೂ ಕೂಡಾ ಬಧುಕನ್ನು ಸಾಗಿಸಬಲ್ಲರು ಸಂಸ್ಕಾರ ಮರೆತರೆ ನಮ್ಮ ದೇಶದ ಸಂಸ್ಕೃತಿ ಹಾಳಾಗುತ್ತದೆ ಇದ–ರಿಂದ ಪಾಲಕರಿಗೆ ಮುಂದೆ ಆಶ್ರಮಗಳಲ್ಲಿ ವಾಸಿಸುವಂತಹ ಪರಸ್ಥಿತಿ ಬರಲಿದೆ ಈಗೀನಿಂದಲೇ ಪಾಲಕರು ಏಚ್ಚೆತ್ತುಕೊಂಡು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಬಿತ್ತುವಂತಹ ಕಾರ್ಯ ಮಾಡಬೇಕು ಅಂತಹ ಸಂಸ್ಕಾರದ ಜೊತೆಗೆ ಶಿಕ್ಷಣ ನೀಡುತ್ತಾ ಸಾಗಿರುವ ಶ್ರೀ ಪರಮಾನಂದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರ ಕಾರ್ಯ ಮಾದರಿಯಾಗಿದೆ ಎಂದರು.


ಇದೇ ಸಮಯದಲ್ಲಿ ಶಾಲಾ ಅಭಿವೃದ್ದಿಗೆ 1 ಲಕ್ಷ ರೂ. ನೇರವು ನೀಡಿದ ಸಾರ್ವಜನಿಕ ಗ್ರಂಥಾಲಯದ ನಿವೃತ್ತ ಉಪ ನಿರ್ದೇಶಕ ಮಲ್ಲನಗೌಡ ರೆಬಿನಾಳ ಅವರಿಗೆ ಶಿಕ್ಷಣ ಸಂಸ್ಥೆಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖಂಡರಾದ ಜಾನರಾವ ದೇಶಮುಖ ಅವರು ವಹಿಸಿದ್ದರು.

ಅತಿಥಿಗಳಾಗಿ ಗ್ರಾಂಪಂ ಅಧ್ಯಕ್ಷರಾದ ಶ್ರೀಮತಿ ಅನ್ನಪೂರ್ಣಾ ಸಜ್ಜನ, ಪಿಕೆಪಿಎಸ್ ಬ್ಯಾಂಕ್ ಅಧ್ಯಕ್ಷ ಮಡಿವಾಳಪ್ಪಗೌಡ ಬಿರಾದಾರ, ನ್ಯಾಯವಾದಿ ಪ್ರಭಾಕರ ಗುಡಗುಂಟಿ, ಅವ್ವಪ್ಪಗೌಡ ಬಿರಾದಾರ, ಶಿವಾನಂದ ದೇಸಾಯಿ, ಬಸನಗೌಡ ನಾಡಗೌಡ, ಚಂದ್ರಶೇಖರ ಸಜ್ಜನ, ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕ ಅರ್ಜುನ ದೊಡಮನಿ ವರಧಿವಾಚಿಸಿದರು. ಶಿಕ್ಷಕ ರವಿ ರಾಠೋಡ ಸ್ವಾಗತಿಸಿದರು. ಶಿಕ್ಷಕಿ ಶ್ವೇತಾ ಏವೂರ, ಹಾಗೂ ಡಿಡಿ ಲಮಾಣೆ ನಿರೂಪಿಸಿದರು. ಮುಖ್ಯ ಗುರುಮಾತೆ ಶ್ರೀಮತಿ ಬಸಮ್ಮ ಹಿರೇಮಠ ವಂದಿಸಿದರು. ಕಾರ್ಯಕ್ರಮದ ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ವಿಶ್ವಪ್ರೇಮ ಭಾವ ಹಂಚಿದ ಐಕೂರ ಆಚಾರ್ಯ



**ಯಾದಗಿರಿ :** ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಪುಟ್ಟ ಗ್ರಾಮ ಐಕೂರ ಗ್ರಾಮದಲ್ಲಿ ವೆಂಕಟಾರ್ಯ ಹಾಗೂ ಸೀತಾಂಬೆಯ ಪುತ್ರನಾಗಿ ಜನಿಸಿದ ಐಕೂರ ಶ್ರೀ ನರಸಿಂಹಾಚಾರ್ಯರರು 18ನೇ ಶತಮಾನದಲ್ಲಿಯೇ ವಿಶ್ವ ಪ್ರೇಮಕ್ಕೆ ಬೆಲೆ ನೀಡುವ ರೀತಿಯಲ್ಲಿ ನಡೆದುಕೊಂಡ ಮಹಾನ್ ವ್ಯಕ್ತಿ, ತತ್ವ ಸಿದ್ಧಾಂತಗಳನ್ನು ಆಚರಣೆಯಲ್ಲಿ ತರುವದರ ಜೊತೆಗೆ ತಮ್ಮಲ್ಲಿರುವ ಪಾಂಡಿತ್ಯವನ್ನು ಜನ ಸಮುದಾಯಕ್ಕೆ ಬೋಧಿಸಿ ಅವರ ಬದುಕು ಹಸನಗೊಳ್ಳುವಂತೆ ದೇವರ ಮಹಿಮೆ, ಆಚಾರ ವಿಚಾರಗಳನ್ನು ಆಡು ಭಾಷೆಯಲ್ಲಿ ತಿಳಿಯುವ ಹಾಗೆ ನಕ್ಕುನಲಿಸುತ್ತ ಹುಡುಗರ ಹುಡುಗರಂತೆ ಜೀವನ ಸಾಗಿಸಿದವರು.

ಸುತ್ತಲಿನ ಜನತೆ ಎಷ್ಟೆ ದುಗುಡ ರೀತಿಯಲ್ಲಿ ಬಂದಾಗ ಅದನ್ನು ಇವರಲ್ಲಿರೂವ ಔದಾರ್ಯತೆ ಮಾತಿನ ಜಾಣ್ಮೆಯಿಂದ ಪರಿಹಾರ ಒದಗಿಹೊಗುತ್ತಿತ್ತು. ಇವರ ಅ0ತರುಪಾಸನೆ, ಬೋಧನೆ ಸರ್ವತ್ರದಲ್ಲಿ ಬಿ0ಬನ್ನು ಕಂಡು ಜನಸೇವೆ ಮಾಡುವ ರೀತಿಗಳು ಜನರನ್ನಾಕರ್ಷಿಸತೊಡಗಿದವು. ಅವರಿಗೆ ಆರೂಢ ರೀತ್ಯಾ ರಾಜಯೋಗವು ಜಾತಕಕ್ಕನುಸರಿಸಿ ಇದ್ದುದರಿ0ದಲೂ ವಿಧೇಯರಾದ, ಭಕ್ತಿವಂತರಾದ ಶಿಷ್ಯ ಸಂಗ್ರಹವು ನಡೆದೇ ನಡೆಯಿತು. ಈ ಕಾರಣದಿಂದ ದೇಶ ಸಂ ಚಾರವೂ ಅನಿವಾರ್ಯವಾಗಿ ಬಂತು. ಅನೇಕರನ್ನು ಉದ್ದರಿಸಿದರು.

ಇವರ ಗ್ರಾಮವು ಆಗಿನ ಕಲಬುರ್ಗಿಯ ಜಿಲ್ಲೆಯಲ್ಲಿ. ಇವರ ಸಂಚಾರ ರಾಯಚೂರ ಜಿಲ್ಲೆ, ಕಲಬುರ್ಗಿ ಜಿಲ್ಲೆ ಭಾಗ್ಯನಗರ ಮುಂತಾದ ಕಡಗೆಲ್ಲ ನಡೆಯಿತು. ಇವರು ತಮ್ಮ ಆಯುಷ್ಯದ ಮೂರು ಪಾಲು ಸಂಚಾರದಲ್ಲಿಯೇ ಕಳೆದರೆಂದರೆ ತಪ್ಪಾಗದು.

ಮನೆಯಲ್ಲಿ ಸಿರೀ ಮಂತಿಕೆಯ ಸಕಲ ಸಾಧನಗಳಿದ್ದರೂ ಅವರ ಲೋಕ ಸೇವೆಯ ಆಕಾಂಕ್ಷೆಯು ಮನೆಯಲ್ಲಿಯೇ ಕುಳಿತಿರುವಂತೆ ಮಾಡಲಿಲ್ಲ. ಅವರ ಬದುಕು.

ಕೇವಲ ಬಡಜನತೆಯ ಕಲ್ಯಾಣಕ್ಕೋಸ್ಕರ ದುಡಿದ ಆಚಾರ್ಯರು, ಮಧ್ವಮತದ ತತ್ವಕ್ಕನುಸರಿಸಿ ಜೀವನ ಒಂದು ಸತ್ಯ, ಜೀವನದಲ್ಲಿ ವಿಹಿತ ಕರ್ಮಗಳನ್ನು ಮಾಡಬೇಕು. ಸಂಸಾರವೆಂದರೆ ವಿಷಯಾಸ ಕ್ರಿಯೇ ವಿನಃ ಈ ಪರಿವಾರವನ್ನು ಈ ಸಮಾಜವನ್ನು ಬಿಟ್ಟು ಓಡಿ ಹೋಗುವದಲ್ಲ. ಎಂಬುದನ್ನು ಆಚಾರ್ಯರು ಮನದಟ್ಟಾಗಿ ಬೋಧಿಸಿ ಶಿಷ್ಯರಿಗೆ ಈ ನಿತ್ಯ ಜೀವನದಲ್ಲಿ ಬರುವ ಎಡರುಗಳನ್ನು ಹೇಗೆ ನಿರ್ಲಪ್ತತೆಯಿಂದ ತಪ್ಪಿಸಿಕೊಳ್ಳಬೇಕೆಬುದನ್ನು ಸ್ವಂತಾಗಿ ತೋರಿಸುತ್ತಿದ್ದರು.

ಪರರಿಗೆ ಎಡರು ಬಂದಾಗ ಆಚಾರ್ಯರು ಯಾವ ಕಷ್ಟಕ್ಕೂ ಹಿಂಜರಿಯದೆ. ತೀರ ಸಾಮಾನ್ಯರಂತೆ ಎಲ್ಲರೊಡನೆ ಬರೆತು ಅದನ್ನು ನಿವಾರಿಸುವದನ್ನು ಆಚಾರ್ಯ ಮಾಡುತ್ತಿದ್ದರು. ಶ್ರೀಮತನ ಬಳಿಯಿದ್ದ ಹಣವನ್ನು ದಾನ ರೂಪದಲ್ಲಿ ಸದ್ವಿನಿಯೋಗವನ್ನು ಮಾಡಿಸಿ ಸಮಾಜ ಉದ್ಧಾರದ ಕಾರ್ಯಗಳನ್ನು ಜನರ ಮನದಲ್ಲಿ ಉಳಿಯುವ ರೀತಿಯಲ್ಲಿ ಕಾರ್ಯ ಮಾಡಿದವರಾಗಿದ್ದರು.

ಇವರ ಪುರಾಣ ಪುಣ್ಯ ಕಥೆಗಳನ್ನು ಕೇಳಿದ ಅನೇಕ ಜನರು ತಮ್ಮ ನಿತ್ಯ ಕರ್ಮಗಳಲ್ಲಿ ರೂಢಿಸುವ ರೀತಿಯಲ್ಲಿ ಹೇಳುವ ಕಾಯಕದಲ್ಲಿ ಜನಾನುರಾಗಿಯಾಗಿದ್ದರು. ಇವರ ಮಾಡಿದೆ ಮಹಿಮಾತೀತ ಕಾರ್ಯಗಳು ಅನೇಕ. ಗುಲಬರ್ಗಾ, ರಾಯಚೂರು, ಹೈದರಾಬಾದ್ ಸುತ್ತಲಿನ ಆನೇಕ ಪ್ರದೇಶಗಳಲ್ಲಿ ಸಂಚರಿಸಿ ಜನತೆಯ ಮನ ಗೆದ್ದವರಾಗಿದ್ದರು.

ಈ ಆಚಾರ್ಯರು ತಾವು ಹರಿಪಾದ ಸೇರುವ ಮುನ್ನ ಯಾರಿಂದಲೂ ಸೇವೆ ಮಾಡಿಸಿಕೊಳ್ಳದೇ ತಮ್ಮ ಇಹ ಲೋಕದ ದಾರಿ ಗೊತ್ತಾದರೂ ಕೂಡ ಎಲ್ಲರನ್ನು ದೂರಕಳಿಸಿ ತಾವೊಬ್ಬರೇ ಉಳಿದು ವೈಯ ಸಂವತ್ಸರ ಫಾಲ್ಗುಣಿ ಶುದ್ಧ ದ್ವಿತಿಯಾದಂದು ಹರಿಪಾದ ಸೇರಿದರು. ಇಂದಿಗೂ ಅವರ ವಂಶಸ್ಥರು ಧಾರ್ಮಿಕ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ ಇದ್ದಾರೆ. ವಿಶ್ವಪ್ರೇಮವೇ ರಾಮ ನೊಲಿಮೆಯದಾರಿ ಎಂದು ಜನಸಮುದಾಯಕ್ಕೆ ತಿಳಿಹೇಳಿ ಸಾಧನೆ ಮಾಡಿತೋರಿದ ಪರಮ ಪೂಜ್ಯ ಐಕೂರಾಚಾರ್ಯರ ಪುಣ್ಯಾರಾಧನೆ ಕಾರ್ಯಕ್ರಮವು ಮೂರು ದಿನಗಳ ಕಾಲ ಶಹಾಪುರ (ಈಗಿನ ವಡಗೇರಾ) ತಾಲೂಕಿನ ಐಕೂರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಫಾಲ್ಗುಣ ಶುದ್ಧ ಪ್ರತಿಪದಾ ದ್ವಿತಿಯಾ ಹಾಗೂ ತೃತೀಯಾ ಈ ಮೂರು ದಿನಗಳ ಕಾಲ ಐಕೂರಾಚಾರ್ಯರ ಪುಣ್ಯಾರಾಧನೆ ನಡೆಯಲಿದ್ದು, ಸುಪ್ರಭಾತ, ಹರಿಕಥಾಮೃತಸಾರ ಪಾರಾಯಣ, ಪ್ರವಚನ ಜರುಗವವರು ಭಕ್ತಿಸಂಗೀತ ಕಾರ್ಯಕ್ರಮ ನಡೆಯುವವು

ಆಚಾರ್ಯರ ಶಿಷ್ಯರು, ಭಕ್ತವೃಂದ ಈ ಮಹೊತ್ಸವದಲ್ಲಿ ಭಾಗಿಯಾಗಬೇಕೆಂದು ಆಚಾರ್ಯರ ಶಿಷ್ಯವೃಂದ ಪ್ರಕಟಣೆಯಲ್ಲಿ ತಿಳಿಸಿದೆ.

* * *



ಲೇಖನ :
ಶ್ರೀಮತಿ ರೇಖಾ
ಅಜೇಯ ಕುಲಕರ್ಣಿ
ಯಾದಗಿರಿ

# ಪತ್ರಕರ್ತ, ಸಾಹಿತಿ ಕಲ್ಲಪ್ಪ ಶಿವಶರಣ ವಿರಚಿತ 'ಕಲ್ಲು ಮನಸ್ಸು' ಕೃತಿ ಬಿಡುಗಡೆಗೊಳಿಸಿದ ಸಚಿವ ಶಿವರಾಜ ಎಸ್. ತಂಗಡಗಿ

**ವಿಜಯಪುರ :** ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿನ ನಯನ ರಂಗಮಂದಿರದಲ್ಲಿ ಕರ್ನಾಟಕ ಸರಕಾರ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಆಯ್ಕೆಯಾದ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲೆಯ ಪತ್ರಕರ್ತ, ಸಾಹಿತಿ ಕಲ್ಲಪ್ಪ ಶಿವಶರಣ ವಿರಚಿತ 'ಕಲ್ಲು ಮನಸ್ಸು' ಕಲ್ಲರಳಿ ಹೂಮಸು ಕೃತಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ಅವರು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ 'ಕಲ್ಲು ಮನಸ್ಸು' ಕಲ್ಲರಳಿ ಹೂಮಸು ಕೃತಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಆಯ್ಕೆಯಾದ ಹಿನ್ನೆಲೆಯಲ್ಲಿ ಸಚಿವ ಶಿವರಾಜ ಎಸ್. ತಂಗಡಗಿ, ಹೆಸರಾಂತ ಸಾಹಿತಿ ಜೋಗಿ (ಗಿರೀಶ್‌ರಾವ್ ಹತ್ವಾರ್), ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ. ಧರಣಿದೇವಿ ಅವರು ಮುಖ್ಯ ವೇದಿಕೆಯ ಮೇಲೆ ಪ್ರಶಸ್ತಿ ಫಲಕಗಳನ್ನು ಸಾಹಿತಿ, ಪತ್ರಕರ್ತ ಕಲ್ಲಪ್ಪ ಶಿವಶರಣ ಅವರಿಗೆ ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಹಿರಿಯ ಸಾಹಿತಿಗಳು ಸೇರದಿಂತೆ ಅನೇಕರು ಇದ್ದರು.

### ಗ್ಯಾರಂಟಿ ಯೋಜನೆಗಳ ಹೋಬಳಿ ಮಟ್ಟದ ಸಮಾವೇಶ

# ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಸಶಕ್ತೀಕರಣ




**ಮಹಾಲಿಂಗಪುರ :** ಗ್ಯಾರಂಟಿ ಯೋಜನೆ ಜಾರಿಯಿಂದ ಮಹಿಳೆಯರ ಆರ್ಥಿಕ ಸಶಕ್ತೀಕರಣಕ್ಕೆ ಆದ್ಯತೆ ನೀಡಿದಂತಾಗಿದೆ ಎಂದು ಕಾಂಗ್ರೆಸ್ ಮುಖಂಡ ಮಹಾದೇವ ಮುರನಾಳ ಹೇಳಿದರು.

ಸಮೀಪದ ರನ್ನ ಬೆಳಗಲಿಯ ಪಟ್ಟಣ ಪಂಚಾಯ್ತಿ ವತಿಯಿಂದ ಸಭಾಭವನದಲ್ಲಿ ಹಮ್ಮಿಕೊಂಡ ಸರ್ಕಾರದ ಗ್ಯಾರಂಟಿ ಯೋಜನೆಗಳ ಹೋಬಳಿ ಮಟ್ಟದ ಸಮಾವೇಶದಲ್ಲಿ ಮಾತನಾಡಿದರು.

ದೇಶದಲ್ಲಿ ಬೆಲೆಗಳ ಏರಿಳಿತವಾಗುವ ಪರಿಣಾಮ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಬಡಜನರು ಕುಟುಂಬ ನಿರ್ವಹಣೆಗೆ ತೊಂದರೆ ಅನುಭವಿಸುತ್ತಿರುವುದನ್ನು ಅರಿತು ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ಗ್ಯಾರಂಟಿ ಯೋಜನೆಗಳ ಭರವಸೆ ನೀಡಿತ್ತು.ಪಕ್ಷ ಅಧಿಕಾರಕ್ಕೆ ಬಂದತಕ್ಷಣ ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ, ಗೃಹಲಕ್ಷ್ಮಿಯೋಜನೆ, ಉಚಿತ ಅಕ್ಕಿ ವಿತರಿಸುವ ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಗಿದೆ ಎಂದರು.

ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಎನ್.ಎ.ಲಮಾಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ತಲುಪಿಸಲಾಗುವುದು. ಸರ್ಕಾರ ನಿಗದಿ ಪಡಿಸಿದ ಅರ್ಜಿ ನಮೂನೆಗಳ ಮಾಹಿತಿಯನ್ನು ನೀಡುವ ಜತೆಗೆ ಮನೆ ಮನೆಗೆ ಭೇಟಿ ನೀಡಿ ಯೋಜನೆಗಳ ಮಾಹಿತಿ ನೀಡಲಾಗುವುದು ಎಂದರು.

ರಾಘವೇಂದ್ರನೀಲಣ್ಣವರಮಾತನಾಡಿದರು. ಬಿ.ಎಂ.ಪಾಟೀಲ, ಸಂಗಪ್ಪಅಮಾತಿ, ಸಂತೋಷಚವಾಣ, ಪಿ.ಡಿ.ನಾಗನೂರ, ರಾಜು ಮುಗಳಖೋಡ, ಎಸ್.ಬಿ.ಚೌಧರಿ, ಬಾಬು ಜಕಾತಿ, ಸಚಿನ್ ಕಾಸರ ಇದ್ದರು.

## ಪ್ರಾಯೋಗಿಕವಾಗಿ ಚಿಂತನೆ ಮಾಡಿ: ಬೀಳಗಿ



**ಮಹಾಲಿಂಗಪುರ :** ಹೊರಗೆ ಸ್ಪರ್ಧಾತ್ಮಕ ಜಗತ್ತು ಕಾಯುತ್ತಿದೆ. ಹೀಗಾಗಿ,ಚೆನ್ನಾಗಿ ಓದಬೇಕು.ಓದಿದ್ದನ್ನು ಮನನ ಮಾಡಿಕೊಂಡು ಪ್ರಾಯೋಗಿಕವಾಗಿ ಯೋಚನೆ ಮಾಡಬೇಕು ಎಂದು ಪಿಎಸ್ಐ ಪ್ರವೀಣ ಬೀಳಗಿ ಹೇಳಿದರು.

ಪಟ್ಟಣದ ಕೌಜಲಗಿ ನಿಂಗಮ್ಮ ರಂಗಮಂದಿರದಲ್ಲಿ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯು ಶಿಸ್ತು ಅಳವಡಿಸಿಕೊಳ್ಳಬೇಕು.ಶಿಕ್ಷಕರು, ಪಾಲಕ-ರಿಗೆ ಗೌರವಕೊಡುವುದನ್ನು ರೂಢಿಸಿಕೊಳ್ಳಬೇಕು. ಜವಾಬ್ದಾರಿ ಅರಿತುಕೊಂಡು ಏಕಾಗ್ರತೆಯಿಂದ ಓದಿದರೆ ಪರೀಕ್ಷೆಯಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು. ಶಿಕ್ಷಕ ನಾರನಗೌಡ ಉತ್ತಂಗಿ ಮಾತನಾಡಿ ಸರ್ಕಾರಿ ಪಪೂ ಕಾಲೇಜಿನ ಪ್ರಾಚಾರ್ಯ ಶ್ರೀಶೈಲ ನಾಯಕೋಡಿ, ಪುರಸಭೆ ಸಮುದಾಯ ಸಂಘಟನಾಧಿಕಾರಿ ಚಿದಾನಂದ ಮಠಪತಿ, ಶಿಕ್ಷಕ ಸಮೀರ ಚಿಪ್ಪಾಡಿ ಮಾತನಾಡಿದರು.10ನೇ ತರಗತಿಯ ಮಹಾಲಿಂಗ ಕಿಡದಾಳ ಹಾಗೂ ಪ್ರೀತಿ ಮೇಟಿ ಅವರಿಗೆ ಆದರ್ಶ ವಿದ್ಯಾರ್ಥಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು.ಸರಸ್ವತಿ ಭಾವಚಿತ್ರಕ್ಕೆ ಪುರಸಭೆ ಸದಸ್ಯ ಬಸವರಾಜ ಯರಗಟ್ಟಿ ಪುಷ್ಪಾರ್ಚನೆ ಮಾಡಿದರು.ಸುಮಕ್ಕಾ ಸಿಕ್ಕಲಗಾರ, ಪ್ರಗತಿ ಯಾದವಾಡ ಭರತನಾಟ್ಯ ಪ್ರದರ್ಶಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಸಂಜಯ ರಾಠೋಡ ಅಧ್ಯಕ್ಷತೆ ವಹಿಸಿದ್ದರು. ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಪುರಸಭೆ ಸದಸ್ಯ ಶೇಖರ ಅಂಗಡಿ, ಶಿವಾನಂದ ಗೊಳಬಾಳ, ಹನಮಂತ ಪಾಟೀಲ, ಸಂಗಮೇಶ ಮುಕಾರ್ತಿಹಾಳ, ಡಬ್ಲ್ಯೂ. ಜೆ.ಅಲ್ಲಾಖಾನ, ಪವಿತ್ರಾ ಕುರಿ, ಆನಂದ ಕಂಬಾರ, ಮುಖ್ಯಶಿಕ್ಷಕ ಧನಂಜಯ ಕುಲಕರ್ಣಿ ಇದ್ದರು.ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು.

## ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು

**ಮಹಾಲಿಂಗಪುರ :** ಸ್ಥಳೀಯ ಪಂಚಮಸಾಲಿ ಮಹಿಳಾ ಘಟಕದಿಂದ ಮಾ.17 ರಂದು ಗಡಾದಗಲ್ಲಿಯ ಚನ್ನಗಿರೀಶ್ವರ ಸಾಂಸ್ಕೃತಿಕ ಭವನದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅದ್ಧೂ-ರಿಯಾಗಿ ಆಚರಿಸಲಾಗುವುದು ಎಂದು ಸಮಾಜದ ಮಹಿಳಾ ಅಧ್ಯಕ್ಷೆ ಡಾ.ವಿದ್ಯಾ ದಿನ್ನಿಮನಿ ತಿಳಿಸಿದರು.

ಕಿತ್ತೂರು ರಾಣಿ ಚೆನ್ನಮ್ಮ ಸಾಂಸ್ಕೃತಿಕ ಭವನದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 17ರಂದು ಬೆಳಿಗ್ಗೆ 9 ಗಂಟೆಗೆ ಮಹಿಳೆಯರಿಗಾಗಿ ವಚನ ಗಾಯನ, ರಂಗೋಲಿ ಮುಂತಾದ ಸ್ಪರ್ಧೆಗಳ ಆಯೋಜನೆ ಹಾಗೂ ಸಾಧಕ ಮಹಿಳೆಯರ ಸನ್ಮಾನ ಮುಂತಾದ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಉಪಾಧ್ಯಕ್ಷೆ ಎ.ಎ.ಕಿಚಡಿ, ಟ್ರಸ್ಟ್ ಅಧ್ಯಕ್ಷ ಡಾ.ಎ.ಆರ್.ಬೆಳಗಲಿ, ಈರಪ್ಪ ದಿನ್ನಿಮನಿ, ಹನಮಂತ ಶಿರೋಳ, ಡಾ.ಅಶೋಕ ದಿನ್ನಿಮನಿ, ಬಸವರಾಜ ಅಮ್ಮನಗಿ, ನಾಗೇಶ ಖೋತ, ಆನಂದ ಖೋತ, ಎ.ಬಿ.ಗೌಡಪ್ಪನವರ, ಬಸವರಾಜ ಬೀರನಗಡ್ಡಿ, ಬಸಪ್ಪ ಅಮ್ಮನಗಿ ಇತರರಿದ್ದರು. ಸ್ಪರ್ಧೆಯ ನೋಂದಣಿಗಾಗಿ 8088583877 ಅಥವಾ 6362119149 ಸಂಪರ್ಕಿಸಲು ತಿಳಿಸಿದ್ದಾರೆ.

### ಪರಸಪ್ಪ ತಿಮ್ಮಾಪುರ ನಿಧನ



**ಮಹಾಲಿಂಗಪುರ :** ಸಮೀಪದ ಮಂದಬಾವಿ ಗ್ರಾಮದ ಪರಸಪ್ಪ ಪುಂಡಲೀಕಪ್ಪ ತಿಮ್ಮಾಪುರ (40) ಶುಕ್ರವಾರ ನಿಧನರಾದರು.ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಬಸವರಾಜ ಶಿವಲಿಂಗಪ್ಪ ಚಮಕೇರಿ ನಿಧನ



**ಮಹಾಲಿಂಗಪುರ :** ಪಟ್ಟಣದ ಗಣೇಶ ನಗರ ನಿವಾಸಿ, ಹಟಗಾರ ಸಮಾಜದ ಬಸವರಾಜ ಶಿವಲಿಂಗಪ್ಪ ಚಮಕೇರಿ (60) ರವಿವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ಸಿದ್ಧೇಶ್ವರ ಸ್ವಾಮೀಜಿಗಳ ಲಿಂಗೈಕ್ಯ ದಿನವನ್ನು ಪ್ರವಚನ ದಿನವನ್ನಾಗಿ ಆಚರಿಸೋಣ



**ರಬಕವಿ-ಬನಹಟ್ಟಿ :** ನಾಡಿನ ಪ್ರಮುಖ ನಗರ ಮತ್ತು ಗ್ರಾಮೀಣ ಪ್ರದೇಶಗಳು ಸೇರಿದಂತೆ ವಿದೇಶದಲ್ಲಿಯೂ ಪ್ರವಚನ ನೀಡಿರುವ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿಯವರ ಬಯಲಾದ ದಿನವನ್ನು ಸರ್ಕಾರ ಪ್ರವಚನ ದಿನವನ್ನಾಗಿ ಆಚರಿಸಬೇಕು. ಈ ದಿಶೆಯಲ್ಲಿ ಎಲ್ಲರ ಸಹಕಾರ ಮುಖ್ಯವಾಗಿದೆ ಎಂದು ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಭಾನುವಾರ ಇಲ್ಲಿನ ಬ್ರಹ್ಮಾನಂದ ಆಶ್ರಮದಲ್ಲಿ ನಡೆದ ಅನುಭಾವದಂಗಳ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಹಿತಿ ಸಿದ್ಧರಾಜ ಪೂಜಾರಿ ಮಾತನಾಡಿ, ಅನುಭಾವಿಗಳು ಆಡಿದ ಮಾತುಗಳು ಹೃದಯವನ್ನು ತಟ್ಟುತ್ತವೆ. ಅನುಭಾವಿಗಳು ಮತ್ತು ಅನುಭವಸ್ಥ-ರಿಗೆ ಪ್ರಕೃತಿ ಆಧೀನವಾಗಿರುತ್ತದೆ. ಪ್ರಣವ ಮತ್ತು ಓಂಕಾರಗಳು ಸಂಗೀತದ ವಿಸ್ತಾರದ ರೂಪವಾಗಿದೆ. ಕಲೆಗಳು ಸಮಾಜವನ್ನು ಜೀವಂತವಾಗಿಡುವ ಸಾಧನಗಳಾಗಿವೆ. ಜ್ಞಾನಕ್ಕಿಂತ ದೊಡ್ಡದಾದ ವಸ್ತು ಜಗತ್ತಿನಲ್ಲಿ ಮತ್ತೊಂದಿಲ್ಲ ಎಂದು ತಿಳಿಸಿದರು.

ಕುಂದಗೋಳದ ಕಲ್ಯಾಣಪುರ ಮಠದ ಅಭಿನವ ಬಸವಣ್ಣಜ್ಜನವರು ಮಾತನಾಡಿ, ಅಧ್ಯಾತ್ಮದಲ್ಲಿ ಅಗಾಧವಾದ ಶಕ್ತಿ ಅಡಗಿದೆ. ಅಧ್ಯಾತ್ಮವನ್ನು ಉಳಿಸಿ ಬೆಳೆಸುವ ಮತ್ತು ಅದನ್ನು ಮುನ್ನಡೆಸಿಕೊಂಡು ಹೋಗುವ ಕಾರ್ಯ ಕಷ್ಟದಾಯಕವಾಗಿದೆ. ಭಕ್ತರೆ ಮಠದ ಆಸ್ತಿ. ಭಕ್ತರು ಇಂಥ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಸಹಾಯಕ ನಿರ್ದೇಶಕ ಸುನೀಲ ಪತ್ತಾರ, ಕುಂದಗೋಳದ ಶರಣ ವೀರೇಶ ಪ್ರಳಯಕಲ್ಮಠ, ವಿಶ್ವಜ ಕಾಡದೇವರ, ಗಿರೀಶ ಮುತ್ತೂರ ಮಾತನಾಡಿದರು.

ಮಹಾಲಕ್ಷ್ಮಿ ಭಜನಾ ಮಂಡಳದವರು ಸಂಗೀತ ಸೇವೆ ನಡೆಸಿಕೊಟ್ಟರು.

ಮಹಾದೇವ ಕವಿಶೆಟ್ಟಿ, ಮುರಿಗೆಪ್ಪ ಮಿರ್ಜಿ, ರಾಮಣ್ಣ ಕುಲಗೋಡ, ರೇವಣ್ಣ ಉಮದಿ, ವಕೀಲರಾದ ವೆಂಕಟೇಶ ನಿಂಗಸಾನಿ, ವಿರುಪಾಕ್ಷಪ್ಪ ಹಿರೇಮಠ, ಚನ್ನಪ್ಪ ಕರಲಟ್ಟಿ ಸೇರಿದಂತೆ ಅನೇಕರು ಉಪಸ್ಥಿತ-ರಿದ್ದರು.

## ಧ್ಯಾನದಿಂದ ಉತ್ತಮ ಆರೋಗ್ಯ ಸಾಧ್ಯ: ಬ್ರಹ್ಮಾನಂದ ಶ್ರೀ



**ಮಹಾಲಿಂಗಪುರ :** ನಿಯಮಿತವಾಗಿ ಧ್ಯಾನ ಮಾಡುವುದು ಆರೋಗ್ಯಕ್ಕೆ ಉತ್ತಮ. ಧ್ಯಾನವು ಒತ್ತಡ ಮತ್ತು ಆತಂಕ ಕಡಿಮೆ ಮಾಡುತ್ತದೆ ಎಂದು ಪರಮಾನಂದವಾಡಿಯ ಅಭಿನವ ಬ್ರಹ್ಮಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಿದ್ಧಾರೂಢ ಪಿರಮಿಡ್ ಧ್ಯಾನ ಮಂದಿರದಲ್ಲಿ ಪಿರಮಿಡ್ ಸ್ಪಿರುಚ್ಯುವಲ್ ಸೊಸೈಟೀಸ್ ಮೂವಮೆಂಟ್ ಭಾರತ ವತಿಯಿಂದ ಹಮ್ಮಿಕೊಂಡ ಧ್ಯಾನ ಮತ್ತು ಸತ್ಸಂಗ ಕಾರ್ಯಕ್ರಮದಲ್ಲಿ ಮಾತನಾಡಿದರು.

ಧ್ಯಾನ ಮಾಡಿದರೆ ಅನೇಕ ರೀತಿಯ ದೈಹಿಕ ಆರೋಗ್ಯ ಪ್ರಯೋಜನ ಪಡೆಯಬಹುದು. ಮನಸ್ಥಿತಿ ಚೆನ್ನಾಗಿಟ್ಟುಕೊಳ್ಳಲು ಧ್ಯಾನ ಸಹಾಯ ಮಾಡುತ್ತದೆ.ನಾವೆಲ್ಲರೂ ಪರಿಸರದೊಂದಿಗೆ ಬದುಕಬೇಕು.ಜೀವನದಲ್ಲಿ ಏನಾದರೂ ಸಾಧಿಸಬೇಕೆಂದರೆ ಮೊದಲು ಧ್ಯಾನ ಮಾಡಬೇಕು. ಇದರಿಂದ ಆತ್ಮಕಲ್ಯಾಣದ ಜೊತೆ ಲೋಕಕಲ್ಯಾಣವೂ ಆಗುತ್ತದೆ ಎಂದರು.

ಬೆಂಗಳೂರಿನ ಧ್ಯಾನ ಮಾರ್ಗದರ್ಶಕ ಬ್ರಹ್ಮರ್ಷಿ ಪ್ರೇಮನಾಥ ಗುಪ್ತ ಮಾತನಾಡಿ, ದೈನಂದಿನ ಅಭ್ಯಾಸಗಳ ಜೊತೆಗೆ ದಿನದ ಸ್ವಲ್ಪ ಗಂಟೆ ಧ್ಯಾನ ಮಾಡಲು ತೆಗೆದಿರಿಸಿ.ಇದು ನಿಮ್ಮನ್ನು ಶಾಂತಗೊಳಿಸುತ್ತದೆ.ಆರೋಗ್ಯಕರ ನಿದ್ರೆ ಸಿಗುತ್ತದೆ ಎಂದರು.

ಧ್ಯಾನ ಪುಸ್ತಕವನ್ನು ವಿಜಯಲಕ್ಷ್ಮಿ ಅಂಗಡಿ ಉಚಿತವಾಗಿ ಹಂಚಿ ಮುತ್ತೈದೆಯರ ಉಡಿ ತುಂಬಿದರು. ಜಯಶ್ರೀ ಹಿಟ್ಟಿನಮಠ ಮಾತನಾಡಿದರು.ಮಹಾಲಿಂಗಪ್ಪ ಬೀಳಗಿ, ಎಸ್.ಐ.ಕುಂದಗೋಳ, ರಾಜಶೇಖರ ಬರಗಿ, ಸುರೇಶ ಮಟಗಾರ, ಕಲ್ಲಪ್ಪ ಚಿಂಚಲಿ, ದ್ರಾಕ್ಷಾಯಿಣಿ ಢಪಳಾಪುರ, ಜಯಶ್ರೀ ಹಿರೇಮಠ ಇತರರು ಇದ್ದರು.

## ಬರಗಾಲ-ರೈತರ ಸಾಲ ವಸೂಲಾತಿಗೆ ಬಲವಂತದ ಕ್ರಮ ಬೇಡ: ಜಿಲ್ಲಾ ಉಸ್ತುವಾರಿ ಸಚಿವ ಸತೀಶ್

**ಬೆಳಗಾವಿ :** ರಾಜ್ಯದಾದ್ಯಂತ ಬರಗಾಲ ಇರುವ ಕಾರಣ ರೈತರಿಂದ ಯಾವುದೇ ಸಾಲ ವಸೂಲಾತಿಗೆ ಬಲವಂತದ ಕ್ರಮವಹಿಸಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಬ್ಯಾಂಕು ಹಾಗೂ ಸಹಕಾರಿ ಪತ್ತಿನ ಸಂಘಗಳಿಗೆ ನಿರ್ದೇಶನ ನೀಡಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಗುರುವಾರ(ಮಾ.7) ನಡೆದ ಪ್ರಮುಖ ಸಹಕಾರಿ ಪತ್ತಿನ ಸಂಘಗಳು ಮತ್ತು ಬ್ಯಾಂಕ್ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬರಗಾಲದಿಂದ ರೈತರು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಸಾಲ ವಸೂಲಾತಿಗೆ ಯಾವುದೇ ರೀತಿಯ ಒತ್ತಡ ಹೇರಬಾರದು. ಇದಲ್ಲದೇ ರೈತರ ಖಾತೆಗೆ ಜಮೆಯಾಗುವ ವೃದ್ಧಾಪ್ಯ ವೇತನ ಅಥವಾ ಯಾವುದೇ ಸರಕಾರಿ ಸೌಲಭ್ಯಗಳ ಹಣವನ್ನು ಸಾಲದ ಕಂತುಗಳಿಗೆ ಹೊಂದಾಣಿಕೆ ಮಾಡಬಾರದು ಎಂದು ತಿಳಿಸಿದರು.

ಸರಕಾರದಿಂದ ರೈತರಿಗೆ ನೀಡಲಾಗುವ ಶೂನ್ಯ ಬಡ್ಡಿ ಸಾಲಸೌಲಭ್ಯಗಳನ್ನು ಹೆಚ್ಚು ಹೆಚ್ಚು ಜನರಿಗೆ ತಲುಪಿಸಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ಅವರು ಅಧಿಕಾರಿಗಳಿಗೆ ತಿಳಿಸಿದರು.

**3 ತಿಂಗಳು ಸಾಲ ವಸೂಲಾತಿಗೆ ಕ್ರಮ ಬೇಡ:** ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು, ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇರುವುದರಿಂದ ಮುಂದಿನ 3 ತಿಂಗಳವರೆಗೆ ಬಲವಂತದ ಸಾಲ ವಸೂಲಾತಿ ಮಾಡಬಾರದು ಮತ್ತು ರೈತರಿಗೆ ನೋಟೀಸು ಜಾರಿಗೊಳಿಸಿ ತೊಂದರೆ ನೀಡಬಾರದು ಎಂದು ಬ್ಯಾಂಕಿನ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬ್ಯಾಂಕುಗಳು ಮಾತ್ರವಲ್ಲದೇ ಖಾಸಗಿ ಲೇವಾದೇವಿದಾರರಿಂದ ಕೂಡ ಯಾವುದೇ ರೀತಿಯ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವಂತೆ ಅವರು ತಿಳಿಸಿದರು.

ಬೆಳಗಾವಿ(ಉತ್ತರ) ವಿಧಾನಸಭಾ ಮತಕ್ಷೇತ್ರದ ಶಾಸಕರಾದ ಆಸಿಫ್(ರಾಜು) ಸೇಠ್, ಸಹಕಾರಿ ಸಂಘಗಳ ಜಂಟಿ ನಿಬಂಧಕರಾದ ಸುರೇಶ್ ಗೌಡ, ಸಹಕಾರಿ ಸಂಘಗಳ ಉಪ ನಿಬಂಧಕರಾದ ಮಣಿ ಎಂ.ಎನ್. ಹಾಗೂ ಜಿಲ್ಲಾ ಲೀಡ್ ಬ್ಯಾಂಕಿನ ವ್ಯವಸ್ಥಾಪಕರಾದ ಪ್ರಶಾಂತ ಕುಲಕರ್ಣಿ ಹಾಗೂ ವಿವಿಧ ರೈತ ಸಂಘಗಳ ಸದಸ್ಯರು, ಪದಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ನೆಮ್ಮದಿಯ ಬದುಕಿಗೆ ಆಧ್ಯಾತ್ಮಿಕ ಮನೋಭಾವನೆ ಅವಶ್ಯ: ಸಂಸದ ಕಡಾಡಿ




**ಮೂಡಲಗಿ :** ಮುಂದೆ ಬರುವಂತಹ ಪೀಳಿಗೆಗೆ ಅಂತ್ಯಂತ ನೆಮ್ಮದಿಯ ಬದುಕನ್ನು ಸಾಗಿಸಬೇಕಾದರೆ ಒಂದಿಷ್ಟು ಆಧ್ಯಾತ್ಮಿಕ ಮನೋಭಾವನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕತೆ ಇದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಶನಿವಾರ ತಾಲೂಕಿನ ವಡೇರಹಟ್ಟಿ ಗ್ರಾಮದ ವೇದಾಂತಕೇಸರಿ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ ಆಶ್ರಮದಲ್ಲಿ ಆಯೋಜಿಸಿದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ, ಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ಹಾಗೂ ಜ್ಞಾನಯೋಗಿ ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಗುರು ನಮನ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ನಡೆದಾಡುವ ದೇವರೆಂದೇ ಪ್ರಸಿದ್ಧರಾದ ವಿಜಯಪುರ ಜ್ಞಾನಯೋಗಾಶ್ರಮದ ಪರಮಪೂಜ್ಯ ಸಿದ್ದೇಶ್ವರ ಶ್ರೀಗಳು ತಮ್ಮ ಜೀವನದುದ್ದಕ್ಕೂ ಸಮಾಜದ ಏಳಿಗೆಗಾಗಿ ಶ್ರಮಿಸಿ, ಸಮಾಜಕ್ಕೆ ಮಾದರಿಯಾಗಿ ಲಕ್ಷಾಂತರ ಜನರಿಗೆ ದಾರಿದೀಪವಾದ ದಿವ್ಯ ಚೇತನರಾಗಿದ್ದಾರೆ. ಜ್ಞಾನ ದಾಸೋಹದ ಮೂಲಕ ನಮ್ಮೆಲ್ಲರ ಬದುಕನ್ನು ಪರಿವರ್ತನೆ ಮಾಡಿ ಅವರ ಬೆಳಕನ್ನು ಚೆಲ್ಲಿದ್ದು, ಪ್ರತಿಯೊಂದು ಜೀವಿಗಳಲ್ಲಿ ಅವರ ಆರ್ದಶಗಳನ್ನು, ತತ್ವಗಳನ್ನು ಪಾಲಿಸಿ, ಅಪರೂಪದ ಸಂತರೆಂದು ಅವರ ಬದುಕಿನ ಗುಣದಾನ ಮಾಡಿ ಭಕ್ತಿಯಿಂದ ಸ್ಮರಿಸಿದರು.

ಮನುಷ್ಯನ ಸ್ವಭಾವವನ್ನು ಒಂದೇ ಸಲ ತಿದ್ದಲು ಸಾಧ್ಯವಿಲ್ಲ. ಪ್ರತಿನಿತ್ಯ ಪ್ರವಚನ, ಆಧ್ಯಾತ್ಮಿಕ ಚಟುವಟಿ-ಕಗಳಿಗೆ ನಮ್ಮನ್ನು ನಾವೇ ತೊಡಗಿಸಿಕೊಳ್ಳುವುದರ ಮುಖಾಂತರ ಪೂಜ್ಯರು ಹೇಳಿದ ಮಾತನ್ನು ನಮ್ಮ ವೈಯಕ್ತಿಕ ಬದುಕಿಗೆ ಅಳವಡಿಸಿಕೊಳ್ಳುವ ಮೂಲಕ ಒಂದು ಸ್ವಲ್ಪ ಬದಲಾವಣೆಯಾಗಲಿಕ್ಕೆ ಸಾಧ್ಯವಿದೆ. ಗುರುವಿನ ಕೃಪೆಗೆ ಪಾತ್ರರಾಗಬೇಕಾದರೇ ಪೂಜ್ಯರುಗಳು ಮಾಡಿಹೊದ ಕೆಲಸಗಳನ್ನು ನಮ್ಮ ಜೊತೆಗೆ ಇವೆ. ಆ ಪರಂಪರೆಯನ್ನು ಮಂದುವರಿಸುವಂತಹ ಕಾರ್ಯವನ್ನು ನಾವೆಲ್ಲರೂ ಸೇರಿ ಮಾಡೋಣ ಪ್ರತಿ ವರ್ಷವು ಕೂಡಾ ಗುರು ನಮನ ಮಹೋತ್ಸವ ಕಾರ್ಯಕ್ರಮ ಯಶಸ್ವಿಯಾಗಲಿ ನಡೆಯಲಿ ನಮ್ಮ ಬದುಕಿನಲ್ಲಿ ಒಂದಿಷ್ಟು ಬದಲಾವಣೆ ತರಲಿ ಎಂದರು.

ಈ ಸಂದರ್ಭದಲ್ಲಿ ಪೂಜ್ಯಶ್ರೀ ಮಹೇಶಾನಂದ ಮಹಾಸ್ವಾಮಿಗಳು ಪೂಜ್ಯಶ್ರೀ ಷಡಕ್ಷರಿ ಮಹಾಸ್ವಾಮಿಗಳು, ನಾರಾಯಣ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು.ಪ್ರಮುಖರಾದ ಮಾರುತಿ ತೋಳಮರಡಿ, ಹಾಲಪ್ಪ ಮಳಿವಡೇರ, ಮಾರುತಿ ಪೂಜೇರಿ, ಭಗವಂತ ಧರ್ಮಟ್ಟಿ, ಶಂಕರ ಧರ್ಮಟ್ಟಿ ಸೇರಿದಂತೆ ಸ್ಥಳೀಯ ಮುಖಂಡರು, ಆಶ್ರಮದ ಭಕ್ತಾಧಿಗಳು ಉಪಸ್ಥಿತರಿದ್ದರು,

## ಐತಿಹಾಸಿಕ ಆನೆಗೊಂದಿ ಉತ್ಸವ-2024ಕ್ಕೆ ವಿದ್ಯುಕ್ತ ಚಾಲನೆ

## ಅಂಜನಾದ್ರಿ-ಅಯೋಧ್ಯೆ ರೈಲು ನಿಶ್ಚಿತ: ಶಿವರಾಜ ತಂಗಡಗಿ ವಿಶ್ವಾಸ



**ಕೊಪ್ಪಳ :** ನಿಶ್ಚಿತವಾಗಿಯು ಅಂಜನಾದ್ರಿಯಿಂದ ರೈಲೊಂದು ಅಯೋಧ್ಯೆಗೆ ಹೋಗಲೇ ಬೇಕು. ರಾಜ್ಯ ಸರ್ಕಾರವು ಅಭಿವೃದ್ಧಿಗೆ ಪೂರಕವಾಗಿದೆ. ಹೀಗಾಗಿ ಅಂಜನಾದ್ರಿ-ಅಯೋಧ್ಯೆ ರೈಲು ಯೋಜನೆಯ ಸಾಕಾರಕ್ಕೆ ಪ್ರಾಮಾಣಿಕವಾಗಿ ಸಹಕಾರ ನೀಡಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಗಂಗಾವತಿ ತಾಲೂಕಿನ ಆನೆಗೊಂದಿಯ ಉತ್ಸವ ಮೈದಾನದಲ್ಲಿ ಮಾರ್ಚ 11ರಂದು ನಡೆದ ಐತಿಹಾಸಿಕ ಆನೆಗೊಂದಿ ಉತ್ಸವ-2024 ಉದ್ಘಾಟಿಸಿ ಅವರು ಅವರು ಮಾತನಾಡಿದರು.

ಅಖಂಡ ಗಂಗಾವತಿ ತಾಲೂಕು ಭತ್ತದ ಕಣಜವಾಗಿದೆ. ಈ ಭಾಗಕ್ಕೆ ರೈಸ್ ಟೆಕ್ನಾಲಜಿ ಪಾರ್ಕ್ ಅಗತ್ಯವಾಗಿದೆ. ಭತ್ತದಿಂದ ನಾವು ಬೇರೆ ಬೇರೆ ಉತ್ಪನ್ನ ಮಾಡಲು ಇಲ್ಲಿ ಅವಕಾಶವಿದೆ ಎಂದು ಭಾವಿಸಿ ರೈಸ್ ಟೆಕ್ನಾಲಜಿ ಪಾರ್ಕ್ ಆರಂಭದ ಸಾಹಸಕ್ಕೆ ಕೈ ಹಾಕಿದ್ದೇವೆ. ರೈಸ್ ಟೆಕ್ನಾಲಜಿ ಪಾರ್ಕ್‌ಗೆ ಯೋಜಿಸಿದ್ದೇವೆ. ಇದಕ್ಕಾಗಿ 357 ಎಕರೆ ಭೂಮಿ ಮತ್ತು 157 ಕೋಟಿ ರೂ ಕೊಟ್ಟಿದ್ದೇವೆ. ಇದು ಇನ್ನು ಅಭಿವೃದ್ಧಿ ಆಗಬೇಕಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಕಾರ ಬೇಕು ಎಂದು ಸಚಿವರು ತಿಳಿಸಿದರು. ಕೊಪ್ಪಳ ಜಿಲ್ಲೆಯು ಐತಿಹಾಸಿಕವಾಗಿ ವಿಶೇಷತೆ ಹೊಂದಿದೆ. ಕನಕಗಿರಿಯ ಶ್ರೀ ಕಣಕಾಚಲಪತಿ ದೇವಾಲಯ, ಗಂಗಾವತಿಯ ಅಂಜನಾದ್ರಿ, ಕುಕನೂರಿನ ಮಹಾದೇವಾಲಯ ಹೀಗೆ ಹಲವಾರು ವಿಶೇಷತೆಗಳ ಪಟ್ಟಿಯು ಬೆಳೆಯುತ್ತದೆ. ವಿಜಯನಗರ ಅರಸರ ಕಾಲದ ರಾಜಧಾನಿಯಲ್ಲಿ ನಾವು ಈ ಉತ್ಸವ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಆನೆಗೊಂದಿ ಅಂದರೆ ಅದು ಬರೀ ಕೊಪ್ಪಳಕ್ಕೆ ಸೀಮಿತವಾಗಿಲ್ಲ; ಆನೆಗೊಂದಿ ಅಂಜನಾದ್ರಿ ಇಡೀ ರಾಜ್ಯಕ್ಕೆ ಚಿರಪರಿಚಿತವಾಗಿವೆ. ಬರೀ ಉತ್ಸವ ಆದರೆ ಸಾಲದು. ಇಲ್ಲಿನ ನಿಜವಾದ ಇತಿಹಾಸವನ್ನು ನಮ್ಮ ಯುವಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕಿದೆ ಎಂದು ಸಚಿವರು ಹೇಳಿದರು.

ನಾವೆಲ್ಲರೂ ನೋಡಿ ಕಲಿಯುವಂತಹ ಆಡಳಿತವನ್ನು ಶ್ರೀರಂಗದೇವರಾಯಲು ಅವರು ಮಾಡಿದರು. ಶ್ರೀರಂಗದೇವರಾ ಯಲು ಅವರ ಪಕ್ಷನಿಷ್ಠೆ ನಮಗೆ ಆದರ್ಶಪ್ರಾ ಯವಾಗಿದೆ. ಅಂತಹ ಮಹನಿಯರಾದ ಹಿರಿಯರಾದ ಶ್ರೀರಂಗದೇವರಾಯಲು ಅವರ ಹೆಸರನ್ನು ಆನೆಗೊಂದಿ ಉತ್ಸವದ ಭವ್ಯ ವೇದಿಕೆಗೆ ಇಟ್ಟಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಇದಕ್ಕಾಗಿ ಶಾಸಕರಾದ ಜನಾರ್ಧನರೆಡ್ಡಿ ಅವರಿಗೆ ಮತ್ತು ಜಿಲ್ಲಾಡಳಿತಕ್ಕೆ ತಾವು ಅಭಿನಂದನೆ ಸಲ್ಲಿಸುವುದಾಗಿ ಸಚಿವರು ಹೇಳಿದರು.

ಅಂಜನಾದ್ರಿ ಅಭಿವೃದ್ಧಿಗೆ ಬದ್ಧ: ಇಡೀ ದೇಶದ ಜನರು ಗಂಗಾವತಿ ತಾಲೂಕಿನ ಅಂಜನಾದ್ರಿಯ ಕಡೆಗೆ ನೋಡುವ ಹಾಗೆ ನಾವು ಅಂಜನಾದ್ರಿಯನ್ನು ಅಭಿವೃದ್ಧಿಪಡಿಸುತ್ತೇವೆ. ಸಂಸದರು ಮತ್ತು ಶಾಸಕರ ಸಹಕಾರ ಪಡೆದು ಈ ಕಾರ್ಯ ಮಾಡುತ್ತೇವೆ ಎಂದು ಸಚಿವರು ಹೇಳಿದರು. ಜಿಲ್ಲಾಧಿಕಾರಿಗಳು, ಜಿಪಂ ಸಿಇಓ ಅವರಿಗೆ ಅಭಿನಂದನೆ: ಆನೆಗೊಂದಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ಪಾಂಡೆಯ ಮತ್ತು ಪ್ರಾಸ್ತಾವಿಕ ಮಾತನಾಡಿದ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರ ಕನ್ನಡದಲ್ಲಿನ ಭಾಷಣದ ಬಗ್ಗೆ ವಿಷಯ ಪ್ರಸ್ತಾಪಿಸಿದ ಸಚಿವರು, ಬೇರೆ ಬೇರೆ ಪ್ರದೇಶಗಳಿಂದ ಬಂದಿರುವ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಸಿಇಓ ಅವರು ಪ್ರಯತ್ನ ಮಾಡಿ ಕನ್ನಡದಲ್ಲಿ ಸ್ವಾಗತ ಭಾಷಣ ಮತ್ತು ಪ್ರಾಸ್ತಾವಿಕ ಮಾತುಗಳನ್ನಾಡಿರುವುದು ನಿಜಕ್ಕೂ ಅಭಿನಂದನೆಯ ಸಂಗತಿ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವನಾಗಿ ಅವರಿಗೆ ಅಭಿನಂದನೆ ತಿಳಿಸುವುದಾಗಿ ಅವರು ಹೇಳಿದರು.

ರಾಜಕೀಯ ಬೇಡ : ಕೊಪ್ಪಳ, ಕುಷ್ಟಗಿ, ಕನಕಗಿರಿ, ಕಾರಟಗಿ, ಗಂಗಾವತಿ, ಯಲಬುರ್ಗಾ, ಕುಕನೂರ ತಾಲೂಕಿನ ಜನರ ಋಣ ನಾವೆಲ್ಲರೂ ತೀರಿಸಬೇಕು. ಇದಕ್ಕಾಗಿ ನಾವೆಲ್ಲರೂ ಒಂದಾಗಿ ಹೋಗೋಣ. ಅಭಿವೃದ್ಧಿಯ ವಿಷಯದಲ್ಲಿ ರಾಜಕೀಯ ಮಾಡುವುದು ಬೇಡ ಎಂದು ಸಚಿವರು ಹೇಳಿದರು.

ಸಮಾರಂಭದಲ್ಲಿ ರಾಜವಂಶಸ್ಥರಾದ ಲಲಿತಾ ರಾಣಿ ಶ್ರೀರಂಗದೇವರಾಯಲು, ಶಾಸಕರಾದ ಜನಾರ್ಧನ ರೆಡ್ಡಿ ಅವರ ಧರ್ಮಪತ್ನಿ ಅರುಣಾ ಲಕ್ಷ್ಮಿ ಜನಾರ್ಧನ ರೆಡ್ಡಿ, ಆನೆಗೊಂದಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಕೆ.ಮಹಾದೇವಿ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಮುಖಂಡರಾದ ಶ್ರೀನಾಥ ಬಿ., ಮಲ್ಲಿಕಾರ್ಜುನ ನಾಗಪ್ಪನವರ, ರಾಜಶೇಖರ ಹಿಟ್ನಾಳ, ವಿರುಪಾಕ್ಷಪ್ಪ ಸಿಂಗನಾಳ ಹಾಗೂ ಇತರರು ಇದ್ದರು.

# ಕೆಸರಗೊಪ್ಪ ಬೀರಸಿದ್ಧೇಶ್ವರ ಜಾತ್ರೆ ಸಂಭ್ರಮ



**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಗ್ರಾಮದಲ್ಲಿ ಶುಕ್ರವಾರ ಬೀರಸಿದ್ಧೇಶ್ವರ ಜಾತ್ರೆ ಸಂಭ್ರಮದಿಂದ ಆರಂಭಗೊಂಡಿತು. ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಬೆಳಿಗ್ಗೆ ಮಹಾರುದ್ರಾಭಿಷೇಕವನ್ನು ನೆರವೇರಿಸುವ ಮೂಲಕ ಎರಡು ದಿನದ ಬೀರಸಿದ್ಧೇಶ್ವರ ಜಾತ್ರೆಗೆ ವಿಧ್ಯುಕ್ತ ಚಾಲನೆ ನೀಡಿದರು.ಸಂಜೆ ಡೊಳ್ಳಿನ ವಾಲಗ, ರಾತ್ರಿ ಕೆಸರಗೊಪ್ಪ ಹಾಗೂ ಸುತ್ತಮುತ್ತಲಿನ ಗ್ರಾಮದ ಕಲಾವಿದರಿಂದ ಡೊಳ್ಳಿನ ಹಾಡುಗಳ ಪ್ರದರ್ಶನ ಕಾರ್ಯಕ್ರಮ ನಡೆಯಿತು. ಮುಖಂಡರಾದ ಭೀಮಶಿ ಸಂಶಿ, ಬಸಪ್ಪ ಜಾಲಿಕಟ್ಟಿ, ಶಿವಲಿಂಗಪ್ಪ ಕಾರಜೋಳ, ಮಾನಿಂಗಪ್ಪ ಹುಬ್ಬಳ್ಳಿ, ಆನಂದ ಹುಬ್ಬಳ್ಳಿ, ವಿಠ್ಠಲ ಢವಳೇಶ್ವರ, ಭೀಮಶಿ ಸಸಾಲಟ್ಟಿ, ಮಾರುತೆಪ್ಪ ತೇಜಪ್ಪಗೋಳ, ರುದ್ರಪ್ಪ ಚಿನಗುಂಡಿ, ಚನ್ನು ದೇಸಾಯಿ, ವಿಠ್ಠಲ ಬನಾಜ, ಪರಪ್ಪ ಸತ್ತಿಗೇರಿ, ಮಾರುತಿ ಕರೋಶಿ, ಅಲ್ಲಪ್ಪ ದಡ್ಡಿಮನಿ, ಶ್ರೀಶೈಲ ಚಿಣಗುಂಡಿ, ರುದ್ರಪ್ಪ ತೇಲಿ ಇತರರು ಭಾಗವಹಿಸಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State